# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XVI 4 ಏಪ್ರಿಲ್ 1997

### ಈ ಸಂಚಿಕೆಯಲ್ಲಿ

| | | |
|---|---|---|
| ನಾನು ಮುಂಬಯಿ ಸೇರಿದೆ | • ಜಯಮ್ಮ ಸಿ. ಕೆ. ಎಸ್. ರಾವ್ | 2 |
| ಅವಸರವು ಪ್ರಗತಿ ಲಕ್ಷಣವೆ? | • ವಾಸುದೇವ ಕಾಣೆಮಾರ್ | 4 |
| ಇದು ನಮ್ಮ ಪ್ರಾಚೀನ ಭಾರತ - 5 | • ಎಸ್. ಆನಂದ್ ಶಾಸ್ತ್ರಿ | 6 |
| ನನ್ನ ಟೊಯೋಟಾ ! | • ಚಿತ್ರಾ ಪ್ರಸನ್ನ ಕುಮಾರ್ | 8 |
| ಸಂಮೋಹಿನಿ ಚಿಕಿತ್ಸೆ - 15 | • ಡಾ। ಉಷಾರಾವ್ | 9 |
| Dreams - Do they forewarn you of things to come | | 12 |

The Mysore Association, Mumbai
393, Bhaudaji Road, Matunga, Mumbai-400 019.
Tel.: 402 46 47 • Grams: "KARUNADU"

# ನಾನು ಮುಂಬಯಿ ಸೇರಿದೆ

• ಜಯಮ್ಮ ಸಿ. ಕೆ. ಎಸ್. ರಾವ್

ನಮ್ಮ ಯಜಮಾನರು ಸಿ. ಕೆ. ಶಂಕರ ನಾರಾಯಣರಾಯರು, 50ನೇ ಇಸವಿಯಲ್ಲಿ ಮುಂಬಯಿಗೆ ಬಂದರು. ಇಲ್ಲಿಯ ಮನೆಯ ತೊಂದರೆಯಿಂದ ನನ್ನನ್ನು, ಮಕ್ಕಳನ್ನು ಕರೆಸಿಕೊಳ್ಳುವುದು ತೊಂದರೆಯಾಯಿತು. ಇಲ್ಲಿಯ ಬೇಸಿಗೆಯ ರಜಕ್ಕೆ ಊರಿಗೆ ಹೋಗುವವರ ದಯೆಯಿಂದ, ಅಂದರೆ ಶ್ರೀಮಾನ್ ಸತ್ಯನಾರಾಯಣರಾವ್ ಅಂತ ನಮಗೆ ತಿಳಿದವರು ಅವರು, ನಾವು ರಜಕ್ಕೆ ಊರಿಗೆ ಹೋಗುತ್ತೇವೆ. ನಿಮ್ಮ ಮನೆಯವರನ್ನು ಕರೆಸಿಕೊಳ್ಳಿ ಎಂತ ತಿಳಿಸಿದರು. ಅದರಂತೆ ನಮ್ಮ ಭಾವನವರಿಗೆ ಕಾಗದ ಬರೆದರು. ಆದರೆ ನಮ್ಮ ಮನೆ ಪದ್ಧತಿ ಅವರವರ ಕಾಗದವನ್ನು ಅವರೇ ನೋಡಬೇಕು. ನಮ್ಮ ಭಾವನವರು ಊರಿನಲ್ಲಿ ಇರಲಿಲ್ಲ. ಅಷ್ಟರಲ್ಲಿ ಇಲ್ಲಿಂದ ತಾರು (ಟೆಲಿಗ್ರಾಂ) ಏನು ಬಂದರೂ ನಮಗೆ ಪ್ರಯೋಜನವಾಗಲಿಲ್ಲ. ಏನು ವಿಷಯಾಂತ ಗೊತ್ತಿರಲಿಲ್ಲ. ಅಂತೂ ಅವರು ಬಂದು ಟಪಾಲು ನೋಡಿ, ಅಂದಿನ ರಾತ್ರಿನೇ ಅವರ ಭಾವಮೈದುನ (ಕೃಷ್ಣಾಂತ) ಅವರ ಸಂಗಡ ನಮ್ಮನ್ನು ಕಳಿಸಿದರು. ನನಗಂತೂ ಕನ್ನಡನಾಡಿನಿಂದ ಹೊರಗೆ ಬಂದೇ ಗೊತ್ತಿರಲಿಲ್ಲ. ಭಾಷೆ ಅಂತೂ ನಮ್ಮ ಕನ್ನಡ ಬಿಟ್ಟು ಬೇರೆ ಏನೂ ಬರುತ್ತಿರಲಿಲ್ಲ. ಆಗಿನ ಕಾಲದಲ್ಲಿ ಮೊದಲು ರೈಲು ಹತ್ತಿದವರಿಗೆ ಜಾಗ ಹಾಗಾಗಿ ಮಕ್ಕಳನ್ನು ಪೆಟ್ಟಿಗೆ ಮೇಲೆ ಕೂಡಿಸಿ ಇದ್ದ ಜಾಗದಲ್ಲೇ ಅಂತೂ ಮುಂಬಾಯಿಗೆ ಪ್ರಯಾಣ ಬೆಳೆಸಿದೆವು. ಮಕ್ಕಳಿಗಂತೂ ಖುಷಿಯೋ ಖುಷಿ. ಎರಡು ರಾತ್ರೆ ಒಂದು ಹಗಲು ರೈಲಿನಲ್ಲಿ ಕಳೆದು ದಾದರಿನಲ್ಲಿ ಬಂದು ಇಳಿದೆವು. ಕೈಗಾಡಿಯಲ್ಲಿ ಸಾಮಾನು ಹಾಕಿಸಿಕೊಂಡು ವಡಾಲದಲ್ಲಿ ಇರುವ ಸರಕಾರಿಯ ಮನೆ 1ಎಮ್. 3ನೇ ಮನೆ ಅಲ್ಲಿಗೆ ಬಂದೆವು. ನಾವು ಹುಟ್ಟಿದಾರಭ್ಯ ತಂಪಾದ ಊರಿನಲ್ಲಿದ್ದವರು ಶೆಖೆಯು ನಮಗೆ ಪರಿಚಯವಿರಲಿಲ್ಲ. ಇಷ್ಟು ಶಿಖೆನಾಂತ ಕೇಳಿದರೆ ಅದಕ್ಕೇ ಈಗ ಮನೆ ಸಿಕ್ಕಿರೋದೂಂತ, ಈ ಬೇಸಿಗೆಯಲ್ಲಿ ಎಲ್ಲರೂ ಊರಿಗೆ ಹೋಗುತ್ತಾರೇಂತ ತಿಳೀತು.

ನಾವು ಬಂದ 2ನೇ ದಿನ ನಮ್ಮ ಯಜಮಾನರ ಆಪ್ತ ಸ್ನೇಹಿತರಾದ K.V.S. ಶಾಸ್ತ್ರಿಗಳೂಂತ, ಅವರು ಕೆಲಸದ ಮೇಲೆ ಸೂರತ್ತಿಗೆ ಹೋಗಿದ್ದವರು ಬಂದರು ಮಕ್ಕಳು ಇವರು ಯಾವ ಮಾವಾಂತ ಅವರ ತಂದೆಯನ್ನು ಕೇಳಿ, ತಕ್ಷಣ ಸೂರತ್‌ಮಾವಾಂತ ಅವರುಗಳೇ ಕೂಗೋಕ್ಕೆ ಶುರು ಮಾಡಿದರು. ಆಗಿನಿಂದಲೂ ಅವರು ನಮ್ಮ ಮನೆಯವರಿಗೆಲ್ಲಾ ಸೂರತ್ -ಮಾವ ಆಗಿ, ಮೊಮ್ಮಕ್ಕಳಿಗೆಲ್ಲಾ ಸೂರತ್ ಮಾವ, ತಾತ ಆಗಿದ್ದಾರೆ. ಅವರ ವಿಷಯವೆಲ್ಲಾ ತಿಳಿದುಕೊಂಡು, ನಿಮ್ಮ ಶ್ರೀಮತಿಯವರನ್ನೂ ಕರೆಸೀಂತ ಕೇಳಿದ್ದಕ್ಕೆ, ನಮ್ಮ ಕೇಳಿಕೆಯನ್ನು ನೆರವೇರಿಸಿದರು. ಅವರ ಶ್ರೀಮತಿಯವರು ಅವರ ಅಣ್ಣನ ಸಂಗಡ ಬಂದರು. ಅವರು ಬಂದ ಮೇಲೆ ನಮಗೆ ತುಂಬಾ ಚೆನ್ನಾಗಿತ್ತು. ಅವರು ಬಂದ ವಾರಕ್ಕೆ ಮಳೆಗಾಲ ಪ್ರಾರಂಭ ಆಯಿತು. ನಮಗೆ ಮನೆಯನ್ನು ಕೊಟ್ಟವರು ವಾಪಾಸ್ಸು ಬಂದರು. ನಾವು ಆ ಸಮಯದಲ್ಲಿ ಮೈಸೂರು ಅಸೋಸಿಯೇಷನ್ನಿನ ರಸ್ತೆ ಮತ್ತು ಶ್ರೀಮತಿ ಸೀತಮ್ಮನವರು ಮತ್ತು ಶ್ರೀಮಾನ್ ಗೋಪಾಲ ಅಯ್ಯಂಗಾರ್ 3ಮನೆ ಪರಿಚಯ ಆಗಿತ್ತು. ಅವರ ಸಹಾಯವನ್ನು ಮರೆಯುವುದಕ್ಕೆ ಸಾಧ್ಯವಿಲ್ಲ. ಅವರುಗಳ ಒಳ್ಳೆಯತನ ಇನ್ನೂ ಅದೇ ತರಹ ಇದ್ದಾರೆ. ಊರಿಗೆ ಹೊರಡೋದೂಂತ ಆದ ಮೇಲೆ ಒಂದು ದಿನ ಕೆಲಸ ಬಿಟ್ಟು, ಆ ಮಳೆಯಲ್ಲೇ ನಮ್ಮನ್ನು ಟ್ಯಾಕ್ಸಿಯಲ್ಲಿ ಬೊಂಬಾಯಿ ಸುತ್ತಿಸಿ `ಶಾರದಾಭವನದಲ್ಲಿ ಊಟ ಹಾಕಿಸಿ ಹಾಗೇ ಊರಿನ ರೈಲನ್ನು ಹತ್ತಿಸಿದರು. ಆ ಸಮಯದಲ್ಲಿ ನಾವು ಸ್ನೇಹಿತರು ಒಂದು ಬಾಲ್ಕನಿಯಷ್ಟು ಜಾಗ ಸಿಕ್ಕಿದರೂ, ನಾವು ಇಲ್ಲಿಯೇ ರಬಹುದಾಗಿತ್ತೂಂತ ಮಾತಾಡಿಕೊಂಡೆವು. ಆಗ ನಮಗೆ `ಅಷ್ಟೇ' ಅರಮನೆಯಾಗಿತ್ತು.

ದೀಪಾವಳಿಗೆ ಮುಂಚೆ ಘಾಟ್‌ಕೋಪರ್‌ನಲ್ಲಿ ತುಗಾನಿಭವನ್ ಅಂತ ಅಲ್ಲಿಯ ಚಾಲಿನಲ್ಲಿ ಮನೆ ಸಿಕ್ಕಿತು. ಅಲ್ಲಿಗೆ ಬಂದೆವು. ನಾವು ಬಂದ ಸ್ವಲ್ಪ ದಿನಕ್ಕೆ ನಮ್ಮ ಸ್ನೇಹಿತರನ್ನು ಅಂದರೆ ಶಾಸ್ತ್ರಿಗಳು (ಸೂರತ್‌ಮಾವ) ಸುಶೀಲಮ್ಮ ಇವರನ್ನು ಕರೆಸಿಕೊಂಡೆವು. ಆಗ ಅಸೋಸಿಯೇಷನ್ನಿನಲ್ಲಿ ಬೆಳ್ಳಿಹಬ್ಬ ಆಯಿತು. ಆಗ ನಮಗೆ ದಿನವೂ ಮಾತುಂಗಾಕ್ಕೆ ಬರುವ ಅವಕಾಶ ಆಗ ಮೈಸೂರಿನ ಮಹಾರಾಜರಾದ ಶ್ರೀ ಜಯಚಾಮ -ರಾಜೇಂದ್ರ ಒಡೆಯರ್ ಬಂದಿದ್ದರು. ಆಗ ಕನ್ನಡ ಸಂಘಕ್ಕೂ ಬಂದಿದ್ದರು. ಅಸೋಸಿಯೇಷನ್‌ನಲ್ಲಿ ಬಂದು ಸಿಲ್ವರ್ ಸಸಿ (ಮರ) ಹಾಕಿದ್ದರು. ಈಗ ಅದು ಹೆಮ್ಮರ ಆಗಿದೆ. ಆಗಿನ ಕಾಲದಲ್ಲಿ ಮಾತುಂಗ ಘಾಟ್‌ಕೋಪರ್‌ಗೆ ನಾಲ್ಕಾಣೆ ಇರಬಹುದು. ಬಸ್ಸು ಇರಲಿಲ್ಲ. ನಮ್ಮ ಮನೆಯಿಂದ ಸ್ಟೇಷನ್ನಿಗೆ ಹತ್ತೋ ಹದಿನೈದೋ ನಿಮಿಷದ ನಡೆಯುವ ಸಮಯವಿತ್ತು. ನಮ್ಮ ಯಜಮಾನರಿಗೆ ನಾಟಕದ ಹಂಬಲ ಜಾಸ್ತಿ. ಅವರು ಅವರ ಸ್ನೇಹಿತರು ಅಸೋಸಿಯೇಷನ್‌ನಲ್ಲಿ ಸೇರುತ್ತಿದ್ದರು. ರಾತ್ರೆ ತುಂಬಾ ಹೊತ್ತಾದರೂ ಮನೆ ನೆನಪೇ ಅವರಿಗೆ ಇರುತ್ತಿರಲಿಲ್ಲ. ಹಾಗಾಗಿ, ನಾನೂ ನನ್ನ ಮಗನನ್ನು ಕರೆದುಕೊಂಡು ಹೋಗುತ್ತಿದ್ದೆ. ಆಗ ಅಲ್ಲಿ ಅಂಗಳದಲ್ಲಿ ಹುಲ್ಲನ್ನು (ಲಾನನ್ನು) ಚೆನ್ನಾಗಿ ಬೆಳೆಸಿದ್ದರು. ಸಂಜೆ ಹೊತ್ತು ಬೆತ್ತದ ಕುರ್ಚಿ (ಮೋಡಾ) ಹಾಕಿರುತ್ತಿದ್ದರು. ನಮಗೆ ಅಲ್ಲಿಗೆ ಮಾತಾಡುತ್ತಾ ಕುಳಿತರೆ ಹೊತ್ತೇ ಗೊತ್ತಾಗುತ್ತಿರಲಿಲ್ಲ. ಅಷ್ಟರಲ್ಲಿ ನನ್ನ ಮಗನಿಗೆ ಪುಟ್ಟಣ್ಣ ಚಪಾತಿಗೆ ಸಕ್ಕರೆ ಬೆರೆಸಿ ತಂದು ಕೊಡುತ್ತಿದ್ದರು. ಅಲನು ಬಹಳ ಇಷ್ಟಪಟ್ಟು ತಿನ್ನುತ್ತಿದ್ದನು. ನಾವುನೂ ಒಷ್ಟೋ ಸಲ ರಾಮಣ್ಣೋರು ಮಾಡುವ ಅಡಿಗೆ ನೆನಪು ಬಂದರೆ ಅಲ್ಲೇ ಊಟ ಪೂರೈಸಿಕೊಂಡು ಮನೆಗೆ ಬರುತ್ತಿದ್ದೆವು. ಮಾಟುಂಗಾದಲ್ಲಿ ರೈಲನ್ನು ಹತ್ತಿದ ಕೂಡಲೇ ನಮ್ಮ ಮಗ ನಿದ್ದೆ ಮಾಡುತ್ತಿದ್ದ. ಘಾಟ್‌ಕೋಪರ್‌ನಲ್ಲಿ ಇಳಿದು ನಿಲ್ದಾಣದಿಂದ ಹೊರಗೆ ಬಂದರೆ ಅಲ್ಲಿ ಕುದುರೆಗಾಡಿ, ಅವನಿಗೆ ತುಂಬಾ ಇಷ್ಟವಾದ್ದು. ಸರಿ ಹತ್ತು ನಿಮಿಷ ನಡೆಯೋದು ತಪ್ಪುತ್ತಿತ್ತು. ಈ ಮಧ್ಯೆ ಶಾಸ್ತ್ರಿ ಕೆಲಸದ ಮೇಲೆ ಅಹಮದಾಬಾದಿಗೆ ಪತ್ನಿ ಸಮೇತರಾಗಿ ಹೊರಟಾಗ ನಮ್ಮ ಮೂರು ವರಷದ ದಿನೇಶನನ್ನು ಕರೆದುಕೊಂಡು ಹೋದರು. ಅಲ್ಲಿ ಒಂದುದಿನ ಹಾಗೂ ಹೀಗೂ ಅವರ ಜೊತೆಗೆ ಇದ್ದವನು `ಅಣ್ಣಾಬೇಕು ಅಮ್ಮ ಬೇಕು' ಎಂದು ರಗಳೆಮಾಡಿ ಅವರು ನಮಗೆ ಟೆಲಿಗ್ರಾಂ ಕೊಟ್ಟು ಸುಶೀಲಮ್ಮನವರ ಸಂಗಡ ಅವನನ್ನು

ಕಳುಹಿಸಿಕೊಟ್ಟರು. ನಮ್ಮ ಯಜಮಾನರು ದಾದರ್ ಹಾಗೂ ಬಾಂಬೆಸೆಂಟ್ರಲ್ ಸ್ಟೇಷನ್‌ಗಳಿಗೆ ಹೋಗಿ ಅವರು ಸಿಕ್ಕದೆ ಹ್ಯಾಪ್ ಮೋರೆ ಹಾಕಿಕೊಂಡು ಬಂದರೆ ಸುಶೀಲಮ್ಮನವರು ನಾವಿದ್ದ ತುಗಾನಿ ಭವನಕ್ಕೆ ಬರುವ ಗುಜರಾಥಿಗಳ ಸಂಗಡ ಮನೆ ತಲುಪಿ ಹರಟೆ ಹೊಡೆಯುತ್ತಿದ್ದರು. ನಂತರ ಹಿಂತಿರುಗಿದರು ಅಹಮದಾಬಾದಿಗೆ. ಹೀಗೇನೆ ಆರು ತಿಂಗಳು ಕಳೆಯಿತು. ಆ ಹೊತ್ತಿಗೆ ಬೇಸಿಗೆ ಶುರುವಾಗಿ ನೀರಿಗೇನು ಕಷ್ಟ ಆಯಿತು. ಎಲ್ಲಾವುದಕ್ಕೂ ಭಾವಿ ನೀರು ಬಿಟ್ಟರೆ ಬೇರೆ ಏನೂ ಇರಲಿಲ್ಲ. ನಲ್ಲಿ ನೀರಂತೂ ಅಲ್ಲಿ ಇರಲಿಲ್ಲ. ಹಾಗಾಗಿ ಆ ಮನೆ ಬಿಡೋ ಹಾಗಾಯಿತು. ನಮ್ಮ ಸ್ನೇಹಿತರು ಊರಿಗೆ ಹೋಗಬೇಕಾಗಿ ಬಂತು. ಅವರು ಹೊರಟರು. ನಮಗೆ ವಡಾಲದಲ್ಲಿ ಮನೆ ಸಿಕ್ಕಿತು. ಎರಡು ತಿಂಗಳಿಗೋಸ್ಕರ ಅವರು ಊರಿಗೆ ಹೋದರು, ಅಲ್ಲಿದ್ದೆವು. ಮನೆಯನ್ನು ನಮ್ಮ ಸ್ನೇಹಿತರಾದ ಶ್ರೀಮತಿ ಸೀತಮ್ಮನವರ ಸಹಾಯದಿಂದ ಸಿಕ್ಕಿತು. ಅಷ್ಟರಲ್ಲಿ ನಮ್ಮ ಅತ್ತೆ ಮಾವನವರು ಕಾಶಿಯಾತ್ರೆ ಮುಗಿಸಿಕೊಂಡು ಬಂದಿದ್ದರು. ಯಥಾ ಪ್ರಕಾರ, ನಮಗೆ ಮನೆಕೊಟ್ಟ ಅವರುಗಳು ಬಂದಿದ್ದರು. ಆಗ ನಮ್ಮ ಅತ್ತೆ ಮಾವನವರನ್ನು ಕರೆದುಕೊಂಡು ಬೆಂಗಳೂರಿಗೆ ಹೊರಟಿದ್ದಾಯ್ತು. ಅವರಿಗೋ ಅಸೋಸಿಯೇಷನ್ ನೋಡೋ ಆಸೆಯಿತ್ತು. ಆಗ ಅವಕಾಶವಾಗಲಿಲ್ಲ. ಬೆಂಗಳೂರಿಗೆ ಹೋದೆವು.

ಅಸೋಸಿಯೇಷನ್ ವಿಷಯ ಜಾಗದ ಬಂದರೆ ಅಲ್ಲಿಂದ ಎಂದಿಗೆ ಬರುತ್ತೇನೋಂತ ಅನ್ನಿಸುತ್ತಿತ್ತು. ಎಳೆಂಟು ತಿಂಗಳಾದ ಮೇಲೆ ಮತ್ತೆ ಅಸೋಸಿಯೇಷನ್‌ಗೆ ಬರೋ ಅವಕಾಶ ಆಯ್ತು. ನಮ್ಮ ಮನೆ ವೈದ್ಯರು ಡಾಕ್ಟರ್ ವೈದ್ಯನಾಥನ್ ಆಗಿನಿಂದಲೇ ಅವರ ಮಗಳಿಗೆ ವೀಣೆ ಹೇಳಿಸುತ್ತಿದ್ದರು. ಅವರು ನಮಗೋಸ್ಕರ ಅವರ ಮನೇಲಿ ಒಂದು ರೂಮನ್ನು ಕೊಟ್ಟಿದ್ದರು. ಊಟವನ್ನು ಎರಡು ಹೊತ್ತು ಅಸೋಸಿಯೇಷನ್ನಿಂದ ತರಿಸುತ್ತಿದ್ದೆವು. ಅವರ ಮನೇಲಿ 3 ತಿಂಗಳಿದ್ದೆವು. ಅವರುಗಳ ಮನೆಗೆ ನೆಂಟರು ಬರುವವರಿದ್ದರು. ಆಗ ನಮಗೆ ನಮ್ಮ ಸೀತಮ್ಮನವರೇ ಮನೆಯನ್ನು ಬಿಟ್ಟುಕೊಟ್ಟು ಊರಿಗೆ ಹೋದರು. ನಮಗೆ ಅಸೋಸಿಯೇಷನ್ ಇನ್ನೂ ಹತ್ತಿರವಾಯ್ತು. ಮನೇಲೂ ನಮಗೆ ಬೇಕೂ ಅನ್ನಿಸಿದನ್ನು ಮಾಡಿ ಕೊಳ್ಳುತ್ತಿದ್ದೆವು. ಆಗ ನಮ್ಮ ಯಜಮಾನರು ಊರಿಗೆ ಹೊರಟು ಬಿಡಿ ಅಂತ ಹೇಳುತ್ತಿದ್ದರು. ನಮಗೆ ಇಷ್ಟವಿರಲಿಲ್ಲ. ಹಾಗಾಗಿ ನನ್ನ ಇಷ್ಟದಂತೆ ಸೀತಮ್ಮನವರು ನಮ್ಮನ್ನು ಉಳಿಸಿಕೊಂಡರು. ಅಷ್ಟು ಹೊತ್ತಿಗೆ ನನಗೆ ಸಾಕಷ್ಟು ಜನರ ಪರಿಚಯ ಆಗಿತ್ತು. ಅದರಲ್ಲಿ ವಯಸ್ಸಾದವರೂ ಇದ್ದರು. ಅವರುಗಳ ದೆಸೆಯಿಂದ, ಅವರ ಸೊಸೆ ನಾಗವೇಣಮ್ಮಾಂತ ಅವರು ಕಲೀನಾದಲ್ಲಿ ಈಗ ಇದ್ದಾರೆ. ಆಗ ಅಸೋಸಿಯೇಷನ್ ಹತ್ತಿರ ಇದ್ದರು. ಆಗ ನಮಗೆ ಸ್ನೇಹ ಆಗಿದ್ದು, ಈಗಲೂ ಮನೆ ದೂರ ಇದ್ದರೂ, ನಾವುಗಳು ಸೇರಿದಾಗಲೆಲ್ಲಾ ಅದೇ ಹಿಂದಿನ ವಿಷಯ ನೆನಪು ಮಾಡಿಕೊಳ್ಳುತ್ತೇವೆ. ಅವರ ಅತ್ತೆಯವರ ಸ್ನೇಹಿತರ ಮನೆಯಲ್ಲಿ, ಒಂದು ರೂಮನ್ನು ಕೊಡಿಸಿದರು. ಅಸೋಸಿಯೇಷನ್ ಎದುರು ಜಮ್‌ಷಡಾಬಾದ್‌ನಲ್ಲಿ ಅಲ್ಲಿಗೆ ಬಂದ ಮೇಲೆ ಮಕ್ಕಳಿಬ್ಬರನ್ನು ಕನ್ನಡ ಶಾಲೆಗೆ ಸೇರಿಸಿದೆವು. ಆಗ ಅಸೋಸಿಯೇಷನ್‌ನಿಂದ ನನ್ನ ಮಗ ಪೆಟ್ಟಿವನ್ನು ತರುತ್ತಿದ್ದನು. ನಾನು ಕೆಳಗಿನಿಂದ ಮೇಲಕ್ಕೆ ತೆಗೆದುಕೊಂಡು ಹೋಗುತ್ತಿದ್ದೆನು. ಶನಿವಾರ ಬರುವುದನ್ನೇ ಕಾಯುತ್ತಿದ್ದು ಸಂಜೆ ಸಮಯದಲ್ಲಿ ಸಿಹಿ ತಿಂಡಿ ಖಾರದ್ದು ಮಾಡುತ್ತಿದ್ದರು. ಅದನ್ನು ತರುತ್ತಿದ್ದು ತಿಂದು ಖುಷಿ ಪಡುತ್ತಿದ್ದರು. ತಿಂಗಳಲ್ಲಿ ಎರಡು ಭಾನುವಾರ ಮಸಾಲೆ ದೋಸೆ ಮಾಡುತ್ತಿದ್ದರು. ಬಹಳ ಚೆನ್ನಾಗಿರುತ್ತಿತ್ತು. ಮಾವಿನ ಹಣ್ಣಿನ ಸಮಯದಲ್ಲಿ ಪೂರಿ ಮಾವಿನ ಹಣ್ಣಿನ ರಸ ಮಾಡುತ್ತಿದ್ದರು. ಅದೆಲ್ಲಾ ಈಗಲೂ ಸವಿನೆನಪುಗಳು.

ನಾರಾಯಣ ಸ್ವಾಮಿಗಳು ಅಧ್ಯಕ್ಷರಾಗಿದ್ದ ಗಣಪತಿ ಗೌರಿ ಹಬ್ಬ ಅಲ್ಲಿ ಅದ್ದೂರಿಯಾಗಿ ನಡೆಸುತ್ತಿದ್ದರು. ಗಣಪತಿ ವಿಸರ್ಜನೆ ದಿನ ಬಸ್ಸು ಕಾರುಗಳಲ್ಲಿ ದಾದರ್ ಬೀಚ್‌ಗೆ ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿಯ ಊಟ ಸ್ಮರಿಸಿಕೊಳ್ಳಬೇಕು. ಯಾರೂ ತಪ್ಪಿಸಿ ಕೊಳ್ಳುತ್ತಿರಲಿಲ್ಲ. ವಾಪಾಸ್ಸು ಅವರವರ ಜಾಗಕ್ಕೂ ಹಾಗೂ ಹೀಗೂ ತಲುಪಿಸುತ್ತಿದ್ದರು. ಅದೇ ವರ್ಷ ಮಹಿಳಾಶಾಖೆ (ಲೇಡೀಸ್ ಸೆಕ್ಷನ್) ಪ್ರಾರಂಭ ಆಯ್ತು. ಶ್ರೀಮತಿ ಶಾಮಲಾಂಬ ವರದರಾಜನ್ ಅಧ್ಯಕ್ಷರಾಗಿದ್ದರು. ಮೊದಲ ಕಾರ್ಯಕ್ರಮ ಚಿಕ್ಕಮಕ್ಕಳಿಂದ ಚಿಕ್ಕದೊಂದು ನಾಟಕ ಕಲಿಸಿ ಆಡಿಸಿದ್ದೆವು. ನಾಟಕದ ಹೆಸರು 'ಮನೆ ಮಾರಾಟಕ್ಕಿದೆ' ಅದರಲ್ಲಿ ಬಿ.ಎಸ್.ಎಸ್.ರಾವ್ ಮಕ್ಕಳು ಸರೋಜ, ಲೀಲ, ಮೋಹನ, ಸುಬ್ಬಣ್ಣ, ಅವರ ವಯಸ್ಸಿಗೆ ನಾನು ಹೇಳಿಕೊಟ್ಟಿದ್ದನ್ನು ಚೆನ್ನಾಗಿಯೇ ಮಾಡಿದ್ದರು. ಆದಾದ ನಂತರ, ಶ್ರೀಮತಿ ಶಾಮಲಾಂಬರವರು ಮಹಿಳೆಯರನ್ನೆಲ್ಲಾ ವೈತರಣ ಡ್ಯಾಂ ಕಟ್ಟಿಸುವ ಜಾಗಕ್ಕೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಬಹಳ ಏರ್ಪಾಟು ಮಾಡಿದ್ದರು. ಮರೆಯುವುದಕ್ಕೇ ಸಾಧ್ಯವಿಲ್ಲ ಅಷ್ಟು ಚೆನ್ನಾಗಿತ್ತು. ಪ್ರತಿ ತಿಂಗಳು ಹಿಂದೂಸ್ತಾನ್ ಲೀವರ್, ಪ್ರೀಮಿಯರ್ ಆಟೋಮೋಬೈಲ್, ಪಾರ್ಲೆ ಬಿಸ್ಕಿಟ್ ಫ್ಯಾಕ್ಟರಿ, ಗಾಡ್ರೇಜು, ನ್ಯಾಷನಲ್ ಪಾರ್ಕು, ಬೆಸನ್‌ಫೋರ್ಟ್ ಇನ್ನೂ ಅನೇಕ ಕಡೆಗಳಿಗೆ ಕರೆದುಕೊಂಡು ಹೋಗುತ್ತಾ ಇದ್ದರು. ಜನವರಿ 26ರಂದು ಹೆಂಗಸರದೇ ಕಾರ್ಯಕ್ರಮ ನಾಟಕ, ಫ್ಯಾನ್ಸಿಡ್ರೆಸ್ ಮತ್ತು ಅಸೋಸಿಯೇಷನ್ನಿನೊಳಗೇ ನಮಗೆ ಆಟ. ಸಂಕ್ರಾಂತಿ ಕಾರ್ಯಕ್ರಮ ಎಳ್ಳುಮಾಡಿ ಆಚರಿಸುತ್ತಿದ್ದೆವು. ಈಗಿನ ಜನರೇಷನ್ನವರು ಅದೇ ತರಹ ನಡೆಸುತ್ತಿದ್ದಾರೆ. ಅದರಲ್ಲಿ ಭಾಗವಹಿಸಲು ನಮಗೆ ವಯೋಧರ್ಮದಿಂದ ಕಷ್ಟವಾಗಿದೆ. ಆದರೂ ಕೆಲವು ಕಾರ್ಯಕ್ರಮಕ್ಕೆ ಸಾಮಾನ್ಯವಾಗಿ ತಪ್ಪಿಸುವುದಿಲ್ಲ. ಕಷ್ಟಪಟ್ಟುಕೊಂಡು ಹೋಗುವ ಆಸೆಯಿದೆ. ಹೋಗುತ್ತೇವೆ. ನಾನೂ ಈಗಿನ ಹೆಣ್ಣು

(ಪುಟ 5ಕ್ಕೆ)

**FOR ALL YOUR DOMESTIC AND INTERNATIONAL TRAVEL ARRANGEMENTS**

*CONTACT*

**AUGUST TRAVEL SERVICE**

**Agents For**
**INDIAN AIR LINES,**
**EAST WEST,**
**MODI LUFT &**
**JET AIRLINES**

**REGD. OFFICE:**
3/15 ASHIANA, SECTOR 17,
VASHI, NEW BOMBAY.
PHONE: 768 25 91 * 768 25 58
767 09 02
GRAMS: AUGTRASERV
**ALSO AT:**
2/16, KABBUR HOUSE,
SION (E), BOMBAY-400 022.
PHONE: 407 29 84 * 409 35 73
* 407 77 50

# ಅವಸರವು ಪ್ರಗತಿ ಲಕ್ಷಣವೆ?

● ವಾಸುದೇವ ಕಾಣೆಮಾರ್

ಇಂದಿಗೆ ಎಲ್ಲಾ ಜನಗಳು ತಾವು ವ್ಯವಹಾರಕುಶಲರೆಂದು ತೋರ್ಪಡಿಸಿಕೊಳ್ಳಲು ಬಿಡುವಿಲ್ಲದೆ ದುಡಿವ ಕಾರ್ಯನಿರತರಾಗಿರುವ ಸೋಗು ಹಾಕಿಕೊಳ್ಳುತ್ತಾರೆ. ಎಷ್ಟೋ ಸಲ ಅಂತಹದು ಏನೊಂದು ಹೇಳಿಕೊಳ್ಳುವ ಕೆಲಸವು ಅಲ್ಲಿ ಕಾಣಿಸದಿರುವಾಗಲೂ ಹಾಗೆ ಮಾಡುತ್ತಾರೆ. ಹೀಗೆ ಅವಸರದ ಗಡಿಬಿಡಿ ತೋರಿಸಿದರೆ ಮಾತ್ರ ಕಾರ್ಯತತ್ಪರತೆಯ ಒಳ್ಳೆಯ ಅಭ್ಯಾಸವು ತಮಗೆ ಸಾಧಿಸಬಹುದೆಂದು ಅವರ ಅನಿಸಿಕೆ. ಎಷ್ಟೋ ಸಲ ಇದು ಇಂತಹ ಗಡಿಬಿಡಿಯು ಸುಳ್ಳಾಟದ ಕಪಟನಾಟಕವಾಗಿರುತ್ತದೆ. ಅವರ ಆ ವರ್ತನೆಯು ಪೊಳ್ಳು. ಅವರಲ್ಲೇನೂ ಸ್ವಾರಸ್ಯವಿಲ್ಲವೆಂಬುದನ್ನೂ ಹಾಗೆಯೇ ಸೋಗು ಬೇಡ, ಕೆಲಸಮಾಡಿ ತೋರಿಸು ಎಂದು ಅವರಿಗೆ ಮನದಟ್ಟಾಗಿಸಬೇಕಾದುದು ನಮ್ಮಲ್ಲಿ ತಿಳಿದವರು ಮಾಡಬೇಕಾದ ಕೆಲಸ. ಮನುಷ್ಯ ಕೆಲಸ ಕ್ಷಿಪ್ರತೆಯ ಜಂಜಡದಲ್ಲಿ ಎಂದೂ ಸಿಲುಕಿದ ಸಾಕಷ್ಟು ಆರಾಮವಾಗೇ ಇದ್ದು ಸಾವಧಾನವಾಗಿ ತನ್ನ ಒಂದೊಂದು ಕೆಲಸವನ್ನು ಒಮ್ಮೆ ಎಂಬಂತೆ ಮಾಡುತ್ತ ಹೋದರೆ ಅವನಿಗೆ ಶ್ರೇಯಸ್ಸೆಂಬುದನ್ನು ತಿಳಿಯಬೇಕಾದುದು ಅಗತ್ಯ. ಹಿಡಿದ ಕೆಲಸ ಸರಿಯಾಗಿ ಮಾಡಲಿ.

ಕೈತುಂಬ ಕೆಲಸವಿರುವವನಿಗೆ ಒಂದು ನಿಮಿಷವೂ ಬಿಡುವು ಇರುವುದಿಲ್ಲ ಎಂಬುದನ್ನು ಆ ಕೆಲಸದಲ್ಲಿ ತೊಡಗಿರುವಾಗ ನೋಡುತ್ತೇವೆ. ಆದರೆ ಅದೆಷ್ಟೋ ಮಂದಿ ಇಂತಹ ಕೆಲಸದಲ್ಲಿ ತಲ್ಲೀನರಾಗಿರುವಾಗ ಅವರ ಮನಸ್ಸಿನ ಗಮನವು ಅದರಲ್ಲಿ ಪೂರ್ತಿ ಇರುವುದಿಲ್ಲ. ಉದಾಹರಣೆಗೆ ಒಂದು ಬಸ್ಸಿನ ಡ್ರೈವರನಿಗೆ ಗಮನದಲ್ಲಿ ಹೆಚ್ಚಿನಂಶ ತಾನು ಹೋಗುವ ರಸ್ತೆಯ ಮೇಲಿದ್ದರೂ, ಅದು ಅಭ್ಯಾಸ ಬಲದಿಂದ ಹಾಗಿದ್ದರೂ, ಆತನು ತನ್ನ ಇತರ ವೈಯಕ್ತಿಕ ವಿಚಾರಗಳಲ್ಲಿ ತೊಡಗಿರುತ್ತಾನೆ. ತನ್ನ ಕಿವಿಯನ್ನು ತುರಿಸುವುದನ್ನೂ ತನ್ನೆದುರಿಗಿನ ಗಾಜು ಕಿಟಕಿಯನ್ನು ಒರೆಸಿ ಸ್ವಚ್ಛಪಡಿಸುವುದನ್ನೂ ಅವನು ಒಮ್ಮೊಮ್ಮೆ ಮಾಡುತ್ತಿದ್ದರೂ ಹಾಗೆ ತನ್ನ ಗಮನವು ಬೇರೆಡೆಗೆ ಹೋಗಿ ಮುಖ್ಯ ಕೆಲಸದಲ್ಲಿ ವ್ಯತ್ಯಯವಾಗದಂತೆ ಜಾಗರೂಕನಾಗಿರುತ್ತಾನೆ. ಕೆಲವು ಡ್ರೈವರು ವಾಹನದ ಚಾಲನೆ ಮಾಡುತ್ತಿರುವಾಗ ತನ್ನ ಪಕ್ಕದಲ್ಲಿರುವವರ ಹತ್ತಿರ ಏನಾದರೂ ಮಾತನಾಡುತಿರುತ್ತಾರೆ. ಆದರೆ ಅವರಾರೂ ತಮ್ಮ ಕೈ ಸ್ಟಿಯರಿಂಗ್ ವೀಲ್ (ಚುಕ್ಕಾಣಿ ಚಕ್ರದ ಮೇಲಿರುವುದಾಗಲಿ, ಕಾಲು ಎಕ್ಸಲರೇಟರಿನ (ವೇಗಸಾಧಕ)ದ ಮೇಲಿರುವುದನ್ನಾಗಲಿ ಬಿಡಲಾರರು; ಯಾಕೆಂದರೆ ಹಾಗೆ ಮಾಡಿದರೆ ಚಾಲನೆಯ ಕೆಲಸ ಸಮರ್ಪಕವಾಗಿ ಆಗಲಾರದು. ಈ ಉದಾಹರಣೆಯಿಂದ ನಮಗೆ ತಿಳಿಯುವುದೇನೆಂದರೆ ಯಾರಿಗೇ ಆಗಲಿ ಒಂದು ಕೆಲಸದ ಮೇಲೆ ಲಕ್ಷ್ಯವಿರುವಾಗ ಇನ್ನೊಂದು ಕೆಲಸದಲ್ಲಿ ಅವಧಾನವಿರುವುದೂ ಕಷ್ಟವಾದರೂ ಬೇಕಾದದ್ದೇ. ಅದನ್ನು ನಿಲ್ಲಿಸಲು ಸಾಧ್ಯವಿಲ್ಲ. ಈ ಮಾತನ್ನು ಎಲ್ಲಾ ಬಿಸಿನೆಸ್ ಅಥವಾ ಕಾರ್ಯಾತುರ ಮಂದಿ ತಿಳಿದಿರುತ್ತಾರಾದರೂ ಬಹುಮುಖಿ ಮನಪ್ರವೃತ್ತಿಯನ್ನು ಬೆಳೆಸಿಕೊಳ್ಳಲು ಬಯಸದೆ ಅವರವರು ಹಿಡಿದ ಕೆಲಸದಲ್ಲಿ ನಿಷ್ಠೆಯನ್ನು ತೋರಿಸುತ್ತಾರೆಂಬುದು ಮೆಚ್ಚತಕ್ಕ ಮಾತು.

ಈ ವೇಗದ ಯುಗದಲ್ಲಿ ಎಲ್ಲರೂ ತಮ್ಮ ವ್ಯವಹಾರಗಳು ಕ್ಷಿಪ್ರವಾಗಿ ಮುಗಿಯಬೇಕೆಂದು ಬಯಸುವ ಹಂತವನ್ನು ತಲುಪಿರುವರು. ತ್ವರೆ ಅಥವಾ ಸ್ಪೀಡಿಗೆ ಕೈ ಹಾಕಿ ಸ್ಪರ್ಧಾತ್ಮಕ ಜಗತ್ತಿನಲ್ಲಿ ತಾವು ಶೀಘ್ರ ಯಶಸ್ಸನ್ನು ಪಡೆಯಬೇಕೆಂಬ ಹಂಬಲಕ್ಕೆ ಕಾರಣವು ತಾವು ಕಾಲನಿಗಿಂತ ಮುಂದೆ ಹೋಗಿ ಮುಂದಾಗುವ ಲಾಭವನ್ನು ಇಂದೇ ಪಡೆಯಬೇಕು ಮತ್ತು ಸಮಾಜದಲ್ಲಿ ತಾವು ಮುಂದೆ ಬಂದು ಹಿಂದುಳಿದವರನ್ನು ಹಾಗೆಯೇ ಹಿಂದಕ್ಕೆ ಬಿಟ್ಟು ಬರಬೇಕೆಂಬುದು. ಅವರಲ್ಲಿ ಕೈಲಾಗದ ಬಡಪಾಯಿಗಳು ಅಸಮರ್ಥರೆಂದು ಅವರನ್ನು ಮೂಲೆಗೊತ್ತಿ ತಾವೇ ಪ್ರಸಿದ್ಧರಾಗಬೇಕು ಎಂಬ ಆಪೇಕ್ಷೆ. ಇದಲ್ಲದೆ ತಮ್ಮೆಲ್ಲ ಕೆಲಸಗಳಲ್ಲದೆ ಇನ್ನೂ ಹೆಚ್ಚಿನ ಕೆಲಸ ಮಾಡಲಿಕ್ಕೆ ಮತ್ತು ಅದರಿಂದಲೂ ಲಾಭ ಹೊಂದುವುದಕ್ಕೆ ಎಡೆಯಿರಬೇಕೆಂಬುದು ಅವರ ಆಶಯ.

ಕಾರ್ಯಾತುರರಿಗೆ ತಾವು ಮಾಡುವ ಕೆಲಸವು ಶ್ರಮದ್ದೇ ಇದ್ದರೂ ಅದನ್ನು ಸಾಧಿಸಿದ್ದಂತೆ ಮತ್ತೆ ತಾನಿನ್ನೂ ಕೈತುಂಬ ಕೆಲಸ ಮಾಡುತ್ತಿಲ್ಲ, ಕೆಲಸಗಳಿಂದ ಬಹಳಷ್ಟು ಲಾಭ ಸಂಗ್ರಹಿಸಿದ್ದೇನೆಂಬ ಅನಿಸಿಕೆ ಬರುವುದೂ ಸಹಜ. ಇದು ಕಾರ್ಯವು ಯಶಸ್ವಿಯಾಗುವಾಗ ಆ ಶ್ರೀಮಂತಿಕೆಯಲ್ಲಿ 'ಮತ್ತು' ಬರೆಸುವ ವಿಚಾರ. ನಿಜ ನೋಡಿದರೆ ಕರ್ಮಯೋಗ (ಕುಶಲತೆ)ಯಲ್ಲಿ ಇಂತಹ ಆಸಕ್ತಿಗಳು ಸಲ್ಲವು. ಕಾರ್ಯಗಳಲ್ಲಿ ಎಷ್ಟೋ ವಿಫಲವಾಗುವಂತಹವೂ ಇರುವವು. ಫಲಾಪೇಕ್ಷೆ ಒಳ್ಳೇದಲ್ಲ.

ನಿಧಾನ ಪ್ರವೃತ್ತಿಗೆ ಈಗ ಅವಕಾಶವಿಲ್ಲ. ಅದು ಎಲ್ಲರ ತಾತ್ಸಾರಕ್ಕೆ ಗುರಿಯಾಗುತ್ತಲಿದೆ. ಆದರೂ ಕೆಲಸಗಾರರೆಲ್ಲಾ ತಮ್ಮ ಬಿಡುವಿಲ್ಲದ ಕೆಲಸದಲ್ಲಿ ತಪ್ಪಾಗದಿರಲು ಆದಷ್ಟು ವಿರಾಮ ಗಳಿಸಲಿಕ್ಕಾಗಿಯೂ ಹಾಗೆ ಪುನಶ್ಚೇತನ (Recreation) ಹೊಂದಲಿಕ್ಕಾಗಿಯೂ ಪರಿತಪಿಸುತ್ತಿರುವರು. ಹೆಚ್ಚಿನವರಿಗೆ ಕೆಲಸದಲ್ಲಿ ತಲೆಹಾಕಿದಾಗ ಸ್ವಲ್ಪ ಆರಾಮವೂ ಮನೋಲ್ಲಾಸವೂ ಸಿಗುತ್ತದೆ. ಆದರೆ 'ಮಧ್ಯಂತರ ಅಲ್ಪವಿರಾಮ'ವು (Internal) ಸಿಗಬೇಕೆನ್ನುತ್ತಾರೆ. ಯಾಕೆಂದರೆ ಕೆಲಸವು ಜಾಸ್ತಿಯಾದರೆ ಅದರ ಒಪ್ಪ ಓರಣಗಳು ಕಡಿಮೆಯಾಗುತ್ತವೆ. ಉದಾಹರಣೆಗೆ ಓಡಾಟ ಜಾಸ್ತಿಯಾದರೆ ಕಾಲು ನೋಯುವುದು, ಬೆವರು ಮುಜುಗರವಾಗುವುದು. ಶರೀರಕ್ಕೆ ಆಕಸ್ಮಾತ್ ಅಪಾಯವಾಗುವುದೂ ಇರುತ್ತದೆ. ಕೆಲಸ ಜಾಸ್ತಿಯಾದಾಗ ಮನಸ್ಸಿಗೆ ಒತ್ತಡವಾಗಿ ಮರೆವೂ ಹೆಚ್ಚುವುದು. ನಿರೀಕ್ಷಿತ ಕಾರ್ಯಲಾಭ ಸಾಧಿಸದೆ ಕೆಲವೊಮ್ಮೆ ಕೆಲಸವು ಯದ್ವಾ ತದ್ವಾ ಅಥವಾ ಹೀನ ಪ್ರಮಾಣದ್ದಾಗುವುದೂ ಇರುತ್ತದೆ. ಆದುದರಿಂದ ವಿರಾಮಬೇಕು. ನಿಧಾನವೂ ಬೇಕು. ಕೆಲಸ ಸರಿಯಾಗಬೇಕೆಂದು ಸರಿಯಾಗಿ ಸಾಧಿಸಲು ಹೋಗುವ ಹಂಬಲವೂ ಬೇಕು.

ಆಧುನಿಕ ಯುಗದಲ್ಲಿ ಯಾರೊಡನೆ 'ನನ್ನ ಕೆಲಸಕ್ಕೂ ಇಷ್ಟು ಗಮನಕೊಡಿರಿ' ಎಂದು ಯಾಚಿಸಿದರೆ, 'ನಾನೀಗ ಬಿಸೀ (Busy) ನನಗೆ ಬೇರೆ ಕೆಲಸವಿದ್ದು ನಿಮ್ಮದನ್ನು ಈಗ ಮಾಡಲಾರೆ, ಕ್ಷಮಿಸಿ' ಎಂಬ ನೆವ ಹೇಳಿ ತಪ್ಪಿಸಿಕೊಳ್ಳುವರೇ ಎಲ್ಲರೂ. ಒಂದು ಚಿಕ್ಕಮಗುವೂ ಪರರು ಒತ್ತಾಯಿಸಿದ ಕೆಲಸಕ್ಕೆ ವಿರೋಧ ತೋರಿಸಿ ತನಗೆ ಸಾಧ್ಯ ಸುಲಭವಾಗುವ ಕೆಲಸ ಮಾಡುತ್ತಿರುತ್ತದೆ. ಇದರಿಂದಾಗಿ ಒಳ್ಳೆಯ ಕೆಲಸಗಳು ಸಹಕಾರದಿಂದ ಆಗಬೇಕಾದವು ಆಗುತ್ತಿಲ್ಲ. ನಮ್ಮ ಸಾಮಾಜಿಕ ಸಂಸ್ಥೆಗಳೂ ಸರಕಾರವೂ ಆಫೀಸುಗಳು ನ್ಯಾಯಾಲಯಗಳು, ವಿಧಾನ ಸಭೆಗಳೂ ಹಾಗೆಯೇ ಬೇಜವಾಬ್ದಾರಿ ತೋರುತ್ತಲಿವೆ. ಒಂದು ಸಮರ್ಪಕ ವೇಳೆಯಲ್ಲಿ ನಡೆಯಬೇಕಾದ ಕೆಲಸವು ಆ ವೇಳೆಯಲ್ಲಿ ನಡೆಯುವುದಿಲ್ಲವೆಂಬುದು ಒತ್ತಾದು

# ಇದು ನಮ್ಮ ಪ್ರಾಚೀನ ಭಾರತ - 5

● ಎಸ್. ಆನಂದಶಾಸ್ತ್ರಿ, ಮೈಸೂರು

ನಮ್ಮ ಇತಿಹಾಸದಲ್ಲಿ ನಡೆದ ಪ್ರಮುಖ ಸಂಗತಿಯೊಂದು ನಮ್ಮ ಧರ್ಮ, ನಂಬಿಕೆಯ ಭದ್ರವಾದ ಅಡಿಪಾಯವಾಗಿದ್ದರೂ ಈಗ ನಮ್ಮ ಸುಪ್ತ ಚೇತನದಲ್ಲಿ ಅಡಗಿ ಕೇವಲ ಪುರಾಣವಾಗಿಯೇ ಉಳಿದಿದೆ. ಅದು ನಾಗಪೂಜೆ ! ಅದನ್ನು ಬಳಕೆಗೆ ತಂದವರು ನಾಗಜನಾಂಗವರು. ಅವರು ಸರ್ಪ ಪೂಜಕರಾಗಿದ್ದರು. ಈಗ ಈ ಜನಾಂಗದ ಹೇಳ ಹೆಸರಿಲ್ಲವಾಗಿದೆ ! ಅವರನ್ನೆಲ್ಲಾ ಗುಪ್ತಸಾಮ್ರಾಜ್ಯವು ಅಳಿಸಿಹಾಕಿತು. ಆದರೆ ಅವರು ನಮಗೆ ಬಿಟ್ಟದ್ದು ನಮ್ಮ ಸಂಸ್ಕೃತಿಯ ಎಳೆಎಳೆಯಲ್ಲೂ ನೂತಂತೆ ಇದೆ. ಸರ್ಪಗಾಥಾಗಳು, ಅವರು ನಮಗೆ ಹೇರಿಸಿದ ಹೊರೆ. ಸರ್ಪದಿಂದ ತಪ್ಪಿಸಿಕೊಳ್ಳಲು ಸುತ್ತಲೂ ನೀರು ಇರುವ ಎತ್ತರವಾದ ಕೋಟೆಯೊಂದರಲ್ಲಿ ಇದ್ದರೂ ಪರೀಕ್ಷಿತ ರಾಜನಿಗೆ ಸರ್ಪದಂಷ್ಟ್ರದಿಂದಲೇ ಬಂದ ಸಾವು ಎಂತಹವರ ಎದೆಗುಂಡಿಗೆಯನ್ನೂ ಜಗ್ಗಿಸುತ್ತದೆ. ಈ ಸರ್ಪ ಭಯಕ್ಕೆ ಬಲಿಯಾದ ನಮಗೆ, ಮಹಾಭಾರತದ ಜನಮೇಜಯರಾಯನ ಸರ್ಪಯಾಗ, ಖಾಂಡವದಹನ, ನಳನಿಗೆ ಕಾರ್ಕೋಟಕ ವಿಷದಿಂದ ಬಂದ ವಿಕಾರ ರೂಪ, ವಾಸುಕಿ, ತಕ್ಷಕ ಇತ್ಯಾದಿಗಳು ನಮ್ಮ ಮನಃಪಟಲದಲ್ಲಿ ಅಚ್ಚೊತ್ತಿವೆ. ನಾಗಪಂಚಮಿ, ನಾಗಚತುರ್ಥಿ, ಸುಬ್ಬರಾಯನ ಷಷ್ಠಿ ಇತ್ಯಾದಿ ಹಬ್ಬಗಳನ್ನು ಪಾಲಿಸಲು ನಾವು ತೆಗೆದುಕೊಳ್ಳುವ ಶ್ರದ್ಧೆ ಮತ್ತು ನಿಷ್ಠೆ ಇವೆಲ್ಲರೂ ಭಕ್ತಿಗಿಂತ ಭಯಪೀಡಿತ ಮನಸ್ಸಿನ ರೂಪಗಳೆನ್ನುವುದು ಖಚಿತ! ಅನಿವಾರ್ಯವಿಲ್ಲದೆ, ನಾಗಪೂಜೆಯನ್ನು ಸಾಮಾನ್ಯ ಜನರನ್ನು ಆಕರ್ಷಿಸಲೆಂದೇ ನಮ್ಮ ದೇಶದ ಧರ್ಮಗಳೆಲ್ಲವೂ ತಮ್ಮಲ್ಲಿ ಅದನ್ನು ಅಳವಡಿಸಿಕೊಂಡವೆಂದು ವಿದ್ವಾಂಸರ ಅಭಿಪ್ರಾಯ. ಹಿಂದೂ ಬೌದ್ಧ, ಜೈನ ಮತಗಳೆಲ್ಲದರಲ್ಲೂ ನಾಗಪೂಜೆ, ಬೆಸೆದುಹೋಗಿದೆ. ತಪಸ್ಸಿನಲ್ಲಿದ್ದಾಗ ಗೌತಮ ಬುದ್ಧನನ್ನು ನಾಗ ಮುಚಲಿಂದನು ರಕ್ಷಿಸಿದನೆಂದು ಬಿಹಾರಿನ ಬುದ್ಧಗಯೆಯಲ್ಲಿ ಬೋಧಿವೃಕ್ಷದ ಹತ್ತಿರದಲ್ಲೇ ಆ ನಾಗನ ಪೂಜೆಯ ಸ್ಥಾನವಿದೆ. ಜೈನ ಧರ್ಮದಲ್ಲಿ ಪಾರ್ಶ್ವನಾಥನ ಪ್ರತಿಮೆಯ ತಲೆಯ ಮೇಲೆ ಬಿಚ್ಚಿದ 5, 7ಹೆಡೆಯ ನಾಗನನ್ನು ತೋರಿಸುತ್ತಾರೆ. ಬಿಹಾರಿನ ರಾಜಗೀರ ಪಾಟ್ನಾಕ್ಕೆ ಮತ್ತು ವಿಶ್ವವಿದ್ಯಾಲಯಕ್ಕೆ ಪ್ರಸಿದ್ಧಿಯಾಗಿದ್ದ ನಾಲಂದಾಕ್ಕೆ ದಕ್ಷಿಣದಲ್ಲಿ ಇದೆ. ಅದು ಮಗಧ ರಾಜಧಾನಿ ರಾಜಗೃಹವಾಗಿತ್ತು. ಪುರಾತತ್ವ ಜ್ಞಾನಿಗಳು ಅಲ್ಲಿನ ಮಣಿಯಾರ್ ಮಠ್ ನಲ್ಲಿ ನಾಗದೇವತೆ ಮನಸಾದೇವಿಯ, ಹಾವಿನ ಹುತ್ತದಂತಹ ಗುಡಿಯನ್ನು ಅಗೆದು ತೆಗೆದಿದ್ದಾರೆ.

ಋಗ್ವೇದದಲ್ಲಿ ನಾಗಪೂಜೆಯ ಹೆಸರೇ ಇಲ್ಲ. ಯಜುರ್ವೇದ ಹಾಗಲ್ಲ. ಯಜುರ್ವೇದ ಪಾಂಚಾಲ ದೇಶದಲ್ಲಿ ರಚಿಸಲ್ಪಟ್ಟದ್ದೇ ಕಾರಣವಿರಬೇಕು. ಮಹಾಭಾರತದ ದ್ರೌಪದಿಯ ಪಾಂಚಾಲದೇಶ (ಉತ್ತರ ಪ್ರದೇಶದ ಪೂರ್ವದಲ್ಲಿ)ದ ರಾಜಧಾನಿ ಅಹಿಚ್ಛತ್ರ ನಗರಿ. ಅದು ಮೊದಲಿನಿಂದಲೂ ಆದಿನಾಗನ ಸ್ಥಳವಾಗಿತ್ತು. ಅಥರ್ವ ವೇದದ ಕಾಲದಲ್ಲಿ ಸರ್ಪವು ಪೂಜೆಯ ಸ್ಥಾನವನ್ನು ಆಕ್ರಮಿಸಿತ್ತು. ಸಿಂಧೂ ಸಂಸ್ಕೃತಿಯ ಹರಪ್ಪಾ (ಹಡಪ್ಪ) ಕಾಲೀನ ಮೊಹಂಜೋದಾರೋ (ಡೊ)ದಲ್ಲಿ ಸಿಕ್ಕಿರುವ ಮಣ್ಣಿನ ಮುದ್ರೆ (ಸೀಲ್)ಗಳೆರಡರಲ್ಲಿ ಯೋಗಮುದ್ರೆಯಲ್ಲಿ ಕುಳಿತವನೊಬ್ಬನ ಮುಂದೆ ಎರಡು ಹಾವುಗಳು ಇದೆ. ಅವನು ಯೋಗಿ ಶಿವನೇ ಆದರೆ ಶಿವನಿಗೂ ಸರ್ಪಕ್ಕೂ ಆಗಿನಿಂದಲೇ ಗಂಟು!

ಒಂದು ಕಾಲದಲ್ಲಿ ನಾಗರು ದೇಶವ್ಯಾಪಿ ನೆಲಸಿರಬೇಕು. ಶೇಷನಾಗರು (ಶಿಶುನಾಗರು) ನಾಗದರ್ಶಕರು ಎಂಬ ಹೆಸರಿನ ರಾಜ್ಯ ಆಳಿದವರೂ ಉಂಟು. ಮಥುರಾ ಮಧ್ಯ ಪ್ರದೇಶದ ಭೂಪಾಲಿನ ಉತ್ತರಕ್ಕೆ (ಹಿಂದೆ ಬಹಳ ಪ್ರಖ್ಯಾತವಾಗಿದ್ದ) ವಿದಿಶಾ, ಈಗಿನ ಗ್ವಾಲಿಯರ್ ಪ್ರದೇಶ ಮತ್ತು ಉತ್ತರ ಪ್ರದೇಶದ ಬರ್ಲಿಯ ಸುತ್ತಮುತ್ತದಲ್ಲಿ ಹಿಂದೆ ಶೇಷನಾಗರ ವಲಸೆಯಿತ್ತು. ನಾಗರ ವಲಸೆ ಜಾಗಗಳನ್ನು ನಾಗಪುರ, ನಾಗರಖಂಡ, ಉರಗಪುರ ಇತ್ಯಾದಿ ಹೆಸರಿನಿಂದಲೇ ಗುರುತಿಸಬಹುದು. ನಮ್ಮ ಶಿವಮೊಗ್ಗದ ಭಾಗವೂ ಒಂದುಕಾಲದಲ್ಲಿ ನಾಗರಖಂಡವೆಂದೇ ಕರೆಯಲ್ಪಡುತ್ತಿತ್ತು.

ಚಿಕ್ಕಮಗಳೂರಿನ ಭಾಗವೇ ಆದ ಹಿರೇಮಗಳೂರಿನಲ್ಲಿ ಜನಮೇಜಯ ರಾಜನು ಸರ್ಪ (ನಾಗ)ಯಜ್ಞ ಮಾಡಿದನೆಂದು ಸರ್ಪಗಳು ತಾವೇ ಯಜ್ಞಕುಂಡಕ್ಕೆ ಬಂದು ಬಿದ್ದವೆಂದು ಸ್ಥಳ ಪುರಾಣಹೇಳುತ್ತವೆ. ಗುಂಪು ಗುಂಪೇ ಆತ್ಮಹತ್ಯೆ ಮಾಡಿಕೊಳ್ಳುವ ಅಗತ್ಯವೇನಿತ್ತು? ಮಾರ್ಮಿಕನ ಮರ್ಮವೋ ಅಥವಾ ಆ ಬಲಿಗೆ ನಾವು ಕೊಟ್ಟ ಕಾರಣವೋ?

ಮಹಾರಾಷ್ಟ್ರದ ವೀರ ಸಾಗೇಗುರೂಜಿಯವರು ಮರಾಠಿಯಲ್ಲಿ ಹಿಂದೆ ಯಾವ ರೀತಿ ನಾಗರನ್ನು ನಾವು ಹಿಂಸಿಸಿ ನಾಶಮಾಡಿದೆವು ಎಂಬ ಕರುಣಾಜನಕ ಕಥನವೊಂದನ್ನು ಹೆಣೆದಿದ್ದಾರೆ.

ಆಗ ನಾವು ಮಾಡಿದ್ದು ಈಗ ನಮ್ಮ ಜಾಗ್ರತ ಅರಿವಿನಿಂದಲೇ ಮಾಯವಾಗಿದೆ. ಅದರ ಸೇಡುತೀರಿಸಿಕೊಳ್ಳಲೋ ಎಂಬಂತೆ ಅವರು ನಮ್ಮ ಸುಪ್ತಚೇತನದಲ್ಲಿ ಅಡಗಿ ಭದ್ರವಾಗಿ ಕೂತು ನಮ್ಮ ಭಯಕ್ಕೆ ಕಾರಣವಾಗಿ ಎಡೆಬಿಡದೆ ಕಾಡುತ್ತಿದ್ದಾರೇನೋ !

ಬಿಹಾರಿನ ಪಾಟ್ನಾಗೆ ದಕ್ಷಿಣದಲ್ಲಿರುವ ನಾಲಂದಾದಲ್ಲಿ ನೋಡಲೇಬೇಕಾದ 6-9ನೇ ಶತಮಾನಗಳ ವಿಶ್ವವಿಖ್ಯಾತ ನಾಲಂದಾ ವಿಶ್ವವಿದ್ಯಾನಿಲಯದ ಅವಶೇಷಗಳು ಇವೆ. ಅದು ಒಂದು ಕಾಲದಲ್ಲಿ ಮಗಧದ ರಾಜಧಾನಿಯಾಗಿದ್ದ ರಾಜಗೃಹ (ಈಗಿನ ರಾಜಗೀರ್)ದ `ಬಾಹಿರಿಕ' ವಾಗಿತ್ತು. ಅಂದರೆ ನಗರದ ಹೊರ ವಿಸ್ತಾರವಾಗಿತ್ತು. ಭಗವಾನ್ ಬುದ್ಧ ತನ್ನ 40ನೇ ವರ್ಷದ ಪರ್ಯಟನದಲ್ಲಿ ನಾಲಂದಾಕ್ಕೆ ಬಹಳ ಬಾರಿ ಬಂದು ಹೋಗಿದ್ದನು. ಅದಲ್ಲದೆ ಹತ್ತಿರದಲ್ಲೇ ಕೂಗಳತೆ ದೂರದಲ್ಲೇ ಆ ಬೌದ್ಧ ಧರ್ಮ ಸಂಪತ್ತಿನ ಭಂಡಾಗಾರನೆನಿಸಿಕೊಂಡಿದ್ದ. ಅವನ ಶಿಷ್ಯ ಸಾರಿಪುತ್ರನ ಊರು ಇತ್ತು. ನಾಲಂದಾ ವಿಶ್ವವಿದ್ಯಾನಿಲಯಕ್ಕೆ ಚೀನಾ, ಜಪಾನ್ ಮತ್ತಿತರ ಪೂರ್ವ ಮತ್ತು ಉತ್ತರದ ದೇಶಗಳಿಂದ ಸ್ನಾತಕೋತ್ತರ (ಪೋಸ್ಟ್ ಗ್ರಾಜುಯೇಟ್) ವಿದ್ಯಾರ್ಥಿಗಳು ಬರುತ್ತಿದ್ದರು. ಚೀನದಿಂದ ಹ್ಯೂಯನತ್ಸಾಂಗ್ ಅಲ್ಲಿಗೆ ಬರುವ ಹೊತ್ತಿಗೆ ಮಹಾಪಂಡಿತನೇ ಆಗಿದ್ದ. ಆತನು ಭಗವಾನ್ ಬುದ್ಧನ ಈ ಪವಿತ್ರ ಭೂಮಿಯನ್ನು ಬಹಳ ಭಕ್ತಿ ಮತ್ತು ಉತ್ಸಾಹದಿಂದ ದರ್ಶನಮಾಡಿ ಚಾಚೂ ತಪ್ಪದೆ ಇಲ್ಲಿಯ ಜನಜೀವನ ಮತ್ತು ಬೌದ್ಧ ಕ್ಷೇತ್ರಗಳನ್ನು ವಿವರಿಸಿದ್ದಾನೆ. ಅವನ ವಿವರಣೆ ಪ್ರಕಾರದಿಂದಲೇ ನಾಲಂದಾದಲ್ಲಿ ಬುದ್ಧನು ಸ್ನಾನ

ನಡೆಯುತ್ತಿದ್ದ ಕೆರೆಯನ್ನು ಇವತ್ತಿಗೂ ಗುರುತಿಸಬಹುದು.

ಆಗ ಮಗಧ ರಾಜ್ಯ ಬಿಹಾರಿನ ಪಾಟ್ನಾ ಅಥವಾ ಗಂಗಾನದಿ ಪೂರ್ವ ಭಾಗದಿಂದ ಹಿಡಿದು ಪಶ್ಚಿಮದಲ್ಲಿ ಗುಜರಾತಿನ ಸೌರಾಷ್ಟ್ರ (ಸುರಾಷ್ಟ್ರ) ಈಗಿನ ಮಧ್ಯಪ್ರದೇಶದ ಪಶ್ಚಿಮ ಭಾಗ ಮಾಲವಾ ಪ್ರಸ್ಥಭೂಮಿ (ಇಂದೋರ್, ಉಜ್ಜಯಿನಿ, ಭೋಪಾಲಿನ ಭಾಗ) ದಕ್ಷಿಣದಲ್ಲಿ ಚಿತ್ರದುರ್ಗದವರೆಗೂ ಹರಡಿತ್ತು. ಈ ವಿಶಾಲ ರಾಜ್ಯವು ಅದರ ಏಕಾಧಿಪತ್ಯದಲ್ಲಿತ್ತು. ಮೊದಲು ಮೊದಲು ರಾಜಗೃಹ ನಂತರ ಪಾಟ್ನಾದಿಂದ ಆಳುತ್ತಾ ಹದ್ದುಬಸ್ತಿನಲ್ಲಿಟ್ಟಿದ್ದರು. ಓಡಾಡಲು ಆಗಿದ್ದ ಸಾಧನಗಳೆಂದರೆ ಎತ್ತಿನ ಬಂಡಿ, ಕುದುರೆ, ಕುದುರೆಗಳಿಂದ ಎಳೆಯಲ್ಪಡುವ ರಥಗಳು. ಇಷ್ಟೇ ಸಾಧನಗಳಿಂದ ಅಲ್ಲಲ್ಲಿ ತಮ್ಮ ತಮ್ಮ ಪ್ರತಿನಿಧಿಗಳನ್ನು (ವೈಸರಾಯ್) ಇಟ್ಟು ರಾಜ್ಯದ ವ್ಯವಸ್ಥೆ ನೋಡಿಕೊಳ್ಳುತ್ತಿದ್ದರು. ರಾಜಕುಮಾರ ಅಶೋಕ ಉಜ್ಜಯಿನಿಯಲ್ಲಿ ವೈಸರಾಯ್ ಆಗಿದ್ದನು. ಮೇಲೆ ಉಸ್ತುವಾರಿ ನಡೆಸಿ ವಿಕೇಂದ್ರೀಕರಣದಿಂದಲೇ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದುದರಿಂದ ಅದು ಸುಲಲಿತವಾಗಿ ನಡೆಯುತ್ತಿತ್ತು. ಈ ರಾಜಗೃಹದಲ್ಲಿ (ಈಗಿನ ರಾಜಗೀರ್) 2300-2000 ವರ್ಷಗಳ ಹಿಂದಿನ ತನ್ನದೇ ಕತೆಯನ್ನು ಸಾರಿಹೇಳುವಂತೆ ಆ ಕಾಲದ ರಾಜ್ಯಪಥದ ಕಲ್ಲುಗಳ ಮೇಲೆ ಗಾಡಿಗಳ ಎರಡೂ ಗಾಲಿಗಳ ಆಳವಾದ (ಜಾಡು) ಗುರುತುಗಳು ಇವೆ. ಆ ಗಾಲಿಗಳ ಮಧ್ಯದ ಅಳತೆ ಇವತ್ತಿನಷ್ಟೇ ಇದ್ದು ನಾವು ನೋಡಬಹುದು.

ಹರಪ್ಪ ಮೊಹೆಂಜೋದಾರೋ ನಗರವನ್ನು ಅಗೆದಾಗ ಅಲ್ಲಿ ವೈಚಿತ್ರವೊಂದು ಕಂಡು ಬಂತು. ರಸ್ತೆಯಲ್ಲಿ ಆ ಕಾಲದ ಗಾಡಿಗಳ ಗುರುತು ಕಂಡು ಬಂದು ಅದನ್ನು ಅಳೆದಾಗ ಈ ಇಪ್ಪತ್ತನೇ ಶತಮಾನದಲ್ಲಿ ಆದಿಭಾಗದಲ್ಲೂ ಗಾಡಿಗಳ ಚಕ್ರಗಳ ಮಧ್ಯದ ಅಳತೆ ಅಷ್ಟೇ ಎಂದು ಕಂಡುಬಂತು. ಸಂಪ್ರದಾಯ ಸಾಯದು ಎಂಬುವಕ್ಕೆ ಬೇರೆ ನಿದರ್ಶನ ಬೇಕೆ?

ಈ ಮಧ್ಯೆ ಹರಪ್ಪಾ ನಗರದ ವಿಷಯವೊಂದು ಜ್ಞಾಪಕಕ್ಕೆ ಬರುತ್ತದೆ. ವೇದಗಳಲ್ಲಿ ಇಂದ್ರನನ್ನು ಪುರಂಧರನೆಂತಲೂ ಕರೆಯುತ್ತಾರೆ. ಅಂದರೆ ಅವನು (ಅನಾರ್ಯರ) `ಮಣ್ಣಿನ-ಕೋಟೆಗಳಿಂದ ಆವೃತ ನಗರಗಳನ್ನು ನಾಶಮಾಡಿದವನು' ಎಂದು ಅರ್ಥ. ಋಗ್ವೇದದಲ್ಲಿ ಬರುವ ಅಂಶಿಪ ಒಂದು ನಗರ ಹರಿಯೂಪಿಯಾ ಅದರ ವಿಕೃತರೂಪ ಹರಪ್ಪ ಎಂದು ಪುರಾತತ್ವ ಜ್ಞಾನಿ ಮಾರ್ಟಿಮರ್‌ವೀಲರ್‌ರವರ ಅಭಿಪ್ರಾಯ. `ನಾನು ಇಂದ್ರನನ್ನು (ಹರಪ್ಪದ ನಾಶಕ್ಕೆ) ತಪ್ಪಿತಸ್ಥನೆಂದು ಘೋಷಿಸುತ್ತೇನೆ ಎಂದು ಅವರು ಅನ್ನುತ್ತಾರೆ. ಇಂದ್ರ ಸ್ಟ್ಯಾಂಡ್ಸ್ ಅಕ್ಯೂಸ್ಡ್! ಇದನ್ನು ಎಲ್ಲಾ ವಿದ್ವಾಂಸರೂ ಒಪ್ಪುವುದಿಲ್ಲ. ಪಾಕಿಸ್ತಾನದ ಸಿಂಧೂನದಿ ಮತ್ತು ಅದರ ಉಪನದಿಗಳ ಭೂಮಿಯಲ್ಲಿ ಮತ್ತು ಭಾರತದ ಹರಿಯಾಣ, ಉತ್ತರ ರಾಜಸ್ಥಾನದಲ್ಲಿ ಈಗ ಬತ್ತಿಹೋದ ಸರಸ್ವತಿನದಿಯ ದಂಡೆಯಲ್ಲೇ ವೈದಿಕ ಋಷಿಗಳು ವೇದಗಳನ್ನು ರಚಿಸಿದರು ಎಂದು ವಿದ್ವಾಂಸರ ಅಭಿಪ್ರಾಯ. ಕಛ್ಛಿನ್ ಧೋಲಾವೀರಾ ನಮ್ಮ ಸರಹದ್ದಿನ ಅಂಚಿನಲ್ಲಿದೆ. ಅಲ್ಲಿನ ಉತ್ಖನನದಲ್ಲಿ ಸಿಕ್ಕಿದ ಕೋಟೆಯ ಪಾಯಗಳು ಇವತ್ತು ಕೆಲಸಮಾಡಿ ನಿಲ್ಲಿಸಿರುವಂತೆ ನೋಡಲು ಬಹಳ ರಮ್ಯವಾಗಿವೆ.

ಯಾವ ಭೌತಿಕ ಸಂಸ್ಕೃತಿಯಾದರೂ (ಸಿವಿಲಿಸೇಷನ್) ಕೇವಲ ನಿರ್ಯಾತ (ರಫ್ತು)ದ ಮೇಲೆಯೇ ಅವಲಂಬಿತವಾಗಿದ್ದರೆ ಅದರ ಉಳಿವು ಅದು ಮಾಡಿಕೊಳ್ಳುತ್ತಿರುವ ಬಲವಾಗಿರುವ ವಿದೇಶದ ಮೇಲೆ ಆಧಾರಿತವಾಗಿರುತ್ತದೆ. ತೀವ್ರ ಸ್ಥಿತಿಯಲ್ಲಿ ಅದು ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಗುಲಾಮನಾಗುವುದೂ ಉಂಟು.

ಅಲ್ಲಿಯ ಉಚ್ಚಜನಗಳ (ಬಂಗಾಲಿಯವರು ಹೇಳುವಂತೆ ಭದ್ರಲೋಕ) ನಡೆನುಡಿ, ರೀತಿ ನೀತಿ, ವೇಷ ಆಭೂಷಣಗಳಿಗೂ ಮನಸೋಲುವುದುಂಟು. ಕೇವಲ ವ್ಯಾಪಾರ, ಅಭದ್ರ ಅಧಿಪಾಯ. ಅದು ನಿಂತು ಹೋದರೆ ಈ ಸಂಸ್ಕೃತಿಯೇ ಕುಸಿಯುತ್ತದೆ. ಇದನ್ನು ಪುರಾತತ್ವ ಸಂಶೋಧನೆಯಲ್ಲಿ ಕಾಣುತ್ತೇವೆ. ಕೌಫಾನಿಸಿ ಪಾರ್ಶ್ವಿಕವಾಗಿ ಇದಕ್ಕೆ ಒಂದು ಜ್ವಲಂತ ಉದಾಹರಣೆ. ಕೆಲವೇ ವರ್ಷಗಳ ಹಿಂದೆ ಅದರ ಉತ್ಖನನ (ಎಕ್ಸ್‌ಕವೇಷನ್) ನಡೆಯಿತು.

ಭೂಮಧ್ಯಸಮುದ್ರದಲ್ಲಿ ಗ್ರೀಸ್ ಹತ್ತಿರ ಇರುವ ಕ್ರೀಟ್ (ಈಗಿನ ಕ್ರಿತಿ) ದ್ವೀಪದ ಆಗ್ನೇಯ ಮೂಲೆಯಲ್ಲಿ ಅದಗಿರುವ ಸಣ್ಣದ್ವೀಪ ಕೌಫ್ಲೋ (ಕೌಫಾನಿಸಿ) ಅದರದ್ದೂ ಒಂದು ವಿಚಿತ್ರ ಕಥೆ. ಮ್ಯೂರೆಕ್ಸ್ ಎಂಬುದು ಸಮುದ್ರದ ಒಂದು ಜಲಚರ. ಮುಳ್ಳಿನ ಬಸವನ ಹುಳು. ಇದರಿಂದ ಕಣ್ಣುಕೋರೈಸುವ ಕೆಂಪು ಬಣ್ಣವನ್ನು ಅದರ ವಿವಿಧ ಛಾಯೆಗಳಲ್ಲಿ ಅವರು ತಯಾರಿಸುತ್ತಿದ್ದು ಅದಕ್ಕೆ ರೋಮನ್ ಹೆಂಗಸರು ಮಾರುಹೋಗಿದ್ದರು. ಅವರು ತಿಳಿ ನೀಲಿಬಣ್ಣದ ಕೆಂಪನ್ನು ಪಾಯಲೆಟ್ ಸಾಮ್ರಾಜ್ಯದ ಮತ್ತು ಶಕ್ತಿಯ ಕುರುಹೆಂದು ಇಷ್ಟಪಡುತ್ತಿದ್ದರು. ಫಿಲಿಸ್ತೀನಿಯನ್ನರು (ಈಗಿನ ಇಸ್ರೇಲ್‌ಸುತ್ತ ಮುತ್ತ) ಮತ್ತು ಗ್ರೀಕರು ಅದರ ಬೇರೆ ಛಾಯೆಯ ಕೆಂಪನ್ನು ಇಷ್ಟಪಡುತ್ತಿದ್ದರು. ಛಾಯೆಗಳು ಎಷ್ಟು ವಿವಿಧವಾಗಿರಬಲ್ಲವು ಮತ್ತು ಎಷ್ಟುಮಟ್ಟಿಗೆ ಆಕರ್ಷಕವಾಗಿರಬಲ್ಲವು ಎಂದು ಬಟ್ಟೆಗಳ, ಸೀರೆಗಳ ಮ್ಯಾಚಿಂಗ್ ಸೆಂಟರ್‌ಗಳಲ್ಲಿ ನೋಡಬಹುದು! ಅವುಗಳ ವೈವಿಧ್ಯತೆಯೇ ಅದನ್ನು `ಛೂಸ್' ಮಾಡುವವರ ಚಂಚಲ ಮನಸ್ಸಿನ ಅಶಾಂತಿಗೆ ಕಾರಣ. ಹುಚ್ಚು ಮನಸ್ಸಿಗೆ ಹೂ ಬಾಣಗಳು ಕಂಡಂತೆ! ಛಾಯ್ಸ್ ಕಮ್ಮಿ ಇದ್ದಷ್ಟೂ ಮನಸ್ಸಿಗೆ ನೆಮ್ಮದಿ! ಇರಲಿ ಚಕ್ರವರ್ತಿ ನೀರೋ, ಅದೇ ರೋಮ್ ಉರಿಯುತ್ತಿರುವಾಗ ಪಿಟೀಲು ಬಾರಿಸುತ್ತಿದ್ದನಲ್ಲ ಅವನು, (ಇದು ಕೇವಲ ದಂತಕಥೆಯೆಂದು ಅದರೆ ಅವನು ಅಸಹ್ಯ ಮೊರೆಯೆಂದೂ ಈಗಿನ ವಿವರಣೆ) ಸಾಮಾನ್ಯ ಜನರು ಈ ಬಣ್ಣವನ್ನು ಉಪಯೋಗಿಸಲೇ ಕೂಡದೆಂದು ಆಜ್ಞೆ ಮಾಡಿದ್ದ. ಆಗಿನ ಕಾಲದ ಚಕ್ರವರ್ತಿಗಳಿಗೆ ಅದೇ ಕೆಲಸ! ಕೌಫಾನಿಸಿಯ ಅದೃಷ್ಟ ಖುಲಾಯಿಸಿತು. ಐಶ್ವರ್ಯ ಬೆಳೆಯಿತು. ಆದರೆ ಜನರೋಮನ್ನರ ಹವ್ಯಾಸಗಳಿಗೆ ಬಲಿಯಾದರು. ಬಿಸಿನೀರಿನ ಬುಗ್ಗೆಯ ಸ್ನಾನಗೃಹಗಳು ಅಪೇರಾಗಳು ರೋಮನ್ನರ ವೇಷ ಆಭೂಷಣ ಇತ್ಯಾದಿ ಇತ್ಯಾದಿ.

ಕ್ರಿ.ಶ. 4ನೇ ಶತಮಾನದಲ್ಲಿ ಕೌಫಾನಿಸಿಯ ಅಂತಹವೂ ಬಂತು. ಇದರ ಆಡಂಬರಕ್ಕೆ ಅಸೂಯೆಪಟ್ಟು ಅದೇ ಕ್ರಿಟೀನ ಇತರ ಪಟ್ಟಣಗಳು ತಾವೂ `ಅದಕ್ಕೆ ಭಾಗೀದಾರರೆಂದು ಜಗಳಕಾಯುದರು. ಕೊನೆಗೆ ಆ ಉದ್ಯೋಗವನ್ನೇ ನಾಶ ಮಾಡಿದರು.

ಕೆಲವು ವರ್ಷಗಳ ಹಿಂದೆ ಇರಾನ್ ಇರಾಕ್ ಯುದ್ಧದ ಕಾರಣ ಇರಾನಿನ ಬಂದರುಗಳಿಂದ ಜಪಾನಿಗಾಗಿಯೇ ಸಾಲುಸಾಲಾಗಿ ಅಂತವೇ ಇಲ್ಲದೆ ಹೋಗುತ್ತಿದ್ದ ಕಚ್ಚಾ ತೈಲದ (ಹಡಗುಗಳು) ಟ್ಯಾಂಕರ್‌ಗಳು ನಿಂತುಹೋಗಿ ಜಪಾನು ತನ್ನ ಉದ್ಯೋಗ ಯಂತ್ರಕ್ಕೆ ಧಕ್ಕೆ ಬಂದಾಗ ಯುದ್ಧ ವಿರಾಮಕ್ಕಾಗಿ ಹೆಣಗಾಡಿತು. ಅಣುಬಾಂಬಿನಿಂದ ಪರಿತಪಿಸಿದ ಆ ದೇಶಕ್ಕೆ ವಿಶ್ವಶಾಂತಿಗಲ್ಲವಾದರೂ ತನ್ನ ಉದ್ಯೋಗ ಶಾಂತಿಗಾದರೂ ಆ ಯುದ್ಧ ನಿಲ್ಲಬೇಕಾಗಿತ್ತು.

*ನಗೆಬರಹ*

# ನನ್ನ ಟೊಯೋಟಾ!

**● ಚಿತ್ರಾ ಪ್ರಸನ್ನ ಕುಮಾರ್**

ಏನೊಂದ್ರೆ, ದುಬಾಯ್‌ನ Sheನ ಸೇಲ್‌ನಲ್ಲಿ ಹತ್ತು ದಿರ್ಹ್ಯಾಮ್ಸ್‌ಗೆ ಎಷ್ಟ್ ಚೆನ್ನಾಗಿರುವ ಮ್ಯಾಕ್ಸಿ Mrs. ಭಾಟಿಯಾ ತಂದಿದ್ಳಾಳೆ ನಾನೂ ತೊಗೊಳ್ಳಾ ಅಂತ ಮೊದಲೇ ಲಂಚ ಕೊಟ್ಟು ಇವರನ್ನು ಒಪ್ಪಿಸುವುದಕ್ಕಾಗಿ ಮಧ್ಯಾಹ್ನ ನಿದ್ದೆ ಕೆಟ್ಟು ಮಾಡಿದ್ದ ಮೈಸೂರ್ ಪಾಕ್ ಇವರ ಹತ್ತಿರ ಹಿಡಿದೆ. ಇನ್ನು ಬೇಡಾ ಅಂದ್ರೆ ಈ ಬಾಯಿ ಬೊಂಬಾಯಿ ಬಿಡಬೇಕಲ್ಲ. ಯಾವಾಗಲೂ ಸೇಲ್ ಅಂದ್ರೆ ಕಿಡಿಕಾರುವ ಇವರು ಹತ್ತು ದಿರಾಹ್‌ವ್ಸ್‌ನಲ್ಲೇ ಬಾಯಿಗೆ ಬೀಗ ಹಾಕಬಹುದೆಂದು ಮ್ಯಾಕ್ಸಿ ತೆಗೆದುಕೊಳ್ಳಲು ಅನುಮತಿ ಕೊಟ್ಟರು. ಇನ್ನು ಯಾವಾಗ ನನ್ನ ದುಬಾಯ್‌ಗೆ ಕರ್ಕೊಂಡು ಹೋಗ್ತೀರಾ ಅಂತ ಅವರ ಬಾಯಿಗೆ ಮೈಸೂರು ಪಾಕ್ ಬೀಳಬೇಕೆನ್ನುವಷ್ಟರಲ್ಲಿ ನನ್ನ ಸೆಕೆಂಡ್ ಸೆಂಟೆನ್ಸ್ ಸಿದ್ಧವಾಗಿತ್ತು. `ಇನ್ನು ಶುರುವಾಯಿತು ನಿಂದು. ನನ್ಗೆ ನಿನ್ನ ದುಬಾಯ್ ಗಿಬಾಯ್‌ಗೆ ಕರ್ಕೊಂಡ್ಹೋಗೋದಕ್ಕೆ ಟೈಮ್ ಇಲ್ಲ. ನೀನೇ ಬೇಕಾದ್ರೆ ಹೋಗು ಅಂತ ಖಡಾ ಖಂಡಿತವಾಗಿ ಹೇಳಿದರು. ಇನ್ನು ಇವರ ಹತ್ತಿರ ಮಾತಾಡಿದರೆ ಏನೂ ಪ್ರಯೋಜನವಿಲ್ಲವೆಂದು, ಗಂಡಸು ಅಂತ ದಿಮಾಖ್ ತೋರಿಸ್ತಾರೆ, ನಂಗೇನು ಒಬ್ಬಳೇ ಹೋಗೋದಕ್ಕೆ ಆಗೋದಿಲ್ವಾ, ನಾನೇ Mrs. ಭಾಟಿಯಾ ಜೊತೆ ದುಬಾಯ್‌ಗೆ ಹೋಗಬೇಕೆಂದು ತೀರ್ಮಾನಿಸಿದೆ.

ಮಿಸಸ್. ಭಾಟಿಯಾ ಮತ್ತು ಅವಳ ಅರ್ಧ ಡಜನ್ ಮಕ್ಕಳನ್ನು ಹೊರಡಿಸಿಕೊಂಡು ಮಾರನೆ ದಿನ ದುಬಾಯ್‌ಗೆ ಸಂಭ್ರಮದಿಂದ ಸೇಲ್ ಇದ್ದಲ್ಲಿಗೆ ಬಂದೆವು. ಅಲ್ಲೋ `ಸೇಲ್' ಅಂದ್ರೆ ಕೇಳ್ಬೇಕಾ, ಜನಗಳ ಗುಂಪು ಘೇರಾಯಿಸಿತ್ತು. ಅವರ ಮಧ್ಯದಲ್ಲಿ ಅರಚುತ್ತಿರುವ ಮಕ್ಕಳನ್ನು ಹೊಡಿಸಿಕೊಂಡು ನಮ್ಮ ಬೆಟಾಲಿಯನ್ ಮ್ಯಾಕ್ಸಿ Standಗೆ ಬಂತು. ಅಲ್ಲಿ ನೋಡಿದರೇ ಎಲ್ಲಾ ಮ್ಯಾಕ್ಸಿ ಸಿಂಧಿ ಸೈಜಿನದು. ನನ್ನಂಥ ಕುಳ್ಳಿ ಹಾಕಿಕೊಂಡರೆ ಮುಳುಗಿ ಹೋಗುವ ಹಾಗಿತ್ತು. ಸ್ವಲ್ಪ ಕೆಳಗೆ ಅಂಚು ಹೊಲಿದರೆ ಸರಿಹೋಗತ್ತೆ ಅಂತ ಭಾಟಿಯಾ ಹೇಳಿದ ಮೇರೆಗೆ ಹತ್ತು ದಿರ್ಹ್ಯಾಮ್ಸ್‌ಗೆ ಈ ಕಾಲದಲ್ಲಿ ಏನ್ ಸಿಗುತ್ತೆ ಅಂತ ಒಂದು ಅರ್ಧ ಡಜನ್ ಮ್ಯಾಕ್ಸಿ ತೆಗೆದುಕೊಂಡೆ.

ನಾವು ಆ ಜನಗಳ ಗುಂಪನ್ನು ಬಿಟ್ಟು ಹೊರಗೆ ಬರುವಷ್ಟರಲ್ಲಿ ಎಲ್ಲರ ಹೊಟ್ಟೆ ತಾಳ ಹಾಕುತ್ತಿತ್ತು. ಅಲ್ಲಿಂದ ನಾವು `ಇಂಡಿಯಾ ಹೌಸ್'ನಲ್ಲಿ ಮಸಾಲೆ ದೋಸೆ ತಿಂದು, ಇನ್ನು ರಾತ್ರಿಗೆ ಯಾರು ಅಡಿಗೆ ಮಾಡ್ತಾರೆ ಅಂತ ಇವರಿಗೂ ಕಟ್ಟಿಸಿಕೊಂಡು ಅದರ ಬಿಲ್ ನಾನೇ ತೆತ್ತು ಶಾರ್ಜಾಕ್ಕೆ ಬಂದಾಗ ಅರ್ಧ ಜೀವವಾಗಿತ್ತು.

ಮ್ಯಾಕ್ಸಿಯ ಅಂಚು ಹೊಲಿದು ಗಿಡ್ಡ ಮಾಡಿ ಎರಡು ದಿನ ಒಗೆದು ಹಾಕಿಕೊಂಡಾಗ ಸೊಂಟದಿಂದ ಕಾಲಿನವರೆಗೂ ಹೊಲಿಗೆ ಬಿಚ್ಚಿಕೊಂಡು `ಐಶ್ವರ್ಯ ರೈ' ಸ್ಟೈಲ್ ಆಗಿತ್ತು. ಎಲ್ಲಾ ಮ್ಯಾಕ್ಸಿಗಳಿಗೂ ಒಂದೊಂದು ಹೊಲಿಗೆ ಹಾಕಲುಹೊಲಿಯುವ ಮೆಶಿನ್ ಇದ್ದರೆ ಚೆನ್ನಾಗಿರುತ್ತೆ ಅಂತ ಅನ್ನಿಸಿತು. ಆ ದಿನ ಇವರು ಬರುತ್ತಲೇ ನಂಗೊಂದು ಹೊಲಿಯುವ ಮೆಶಿನ್ ತೆಗೆಸ್ಕೊಡಿ ಅಂತ ಡಿಮಾಂಡ್ ಮಾಡಿದೆ. `ನಿನ್ಗೆ ಹೊಲ್ಗೆ ಗಿಲ್ಗೆ ಏನೂ ಬರಲ್ಲ, ಸುಮ್ಮನೆ ಅದನ್ನೆಲ್ಲಾ ತೊಗೊಂಡರೆ ದುಡ್ಡು ದಂಡ" ಅಂತ ಇವರು ಮೆಶಿನ್ ತೆಗೆದುಕೊಳ್ಳಲು ಎಷ್ಟು ಗೋಗರೆದುಕೊಂಡರೂ ಒಪ್ಪಲಿಲ್ಲ.

ಇವರನ್ನು ಯಾವುದಕ್ಕೂ ಕೇಳ್ಬಾರ್ದು. ನಾನೇ ಯಾಕೆ ದುಡ್ಡು ಸಂಪಾದಿಸಿ ಮೆಶಿನ್ ತೆಗೆದುಕೊಳ್ಳಬಾರದು ಅಂತ ರಾತ್ರಿ ಎಲ್ಲಾ ಯೋಚಿಸಿದೆ. ಅಂತೂ ಕೊನೆಗೊಂದು ಯೋಚನೆ ಹೊಳೀತು. ಮೂರು ನಾಲ್ಕು ಜನ ಹುಡುಗರಿಗೆ ಪಾಠ ಹೇಳಿಕೊಟ್ಟು ಪಾಠದ ದುಡ್ಡಿನಿಂದ ಹೊಲಿಗೆ ಮೆಶಿನ್ ತೆಗೆದುಕೊಳ್ಳಬಹುದು ಅಂತ ಯೋಚನೆ ಬಂದಾಗ ಉಬ್ಬಿಹೋದೆ.

ಮಾರನೆಯ ದಿನದಿಂದ ನನ್ನ ಪಾಠದ ಬೇಟೆ ಶುರುವಾಯಿತು. ಅವರಿವರ ಹತ್ತಿರ ಕೇಳಿ ಅಂತೂ ಐದು ಜನ ಪಾಠದ ಹುಡುಗರನ್ನು ಸಂಪಾದಿಸಿದೆ. ಪಾಪೂನ ಇಟ್ಕೊಂಡು ಹುಡುಗರಿಗೆ ಪಾಠ ಹೇಳಿ ಕೊಡುವುದು ಸುಲಭದ ಕೆಲಸವೇನೂ ಆಗಿರಲಿಲ್ಲ. ಕಾರಣ ಪಾಪು ಮಧ್ಯ ಬಂದು ಹುಡುಗರ ಪುಸ್ತಕ ಹರಿಯುವುದು ಗೀಚುವುದು ಮಾಡುತ್ತಿತ್ತು. ಅದರ ಅರಚಾಟ, ಕಿರಚಾಟ ನಡೆದೇ ಇರುತಿತ್ತು. ಇದರ ಮಧ್ಯದಲ್ಲಿ ಪಾಠದ ಹುಡುಗರು `ಆಂಟಿ ಹಸಿವು' ಅಂತ ಹೇಳಿದಾಗಲೆಲ್ಲಾ ಅವರಿಗೆ ತಿಂಡಿ ತೀರ್ಥ ಒದಗಿಸುವುದರಲ್ಲಿ ಸುಸ್ತಾಗಿ ಹೋದೆ. ಮಧ್ಯಾಹ್ನದ ಪಾಠ ರಾತ್ರಿಗೆ ಇವರು ಬಂದ ಮೇಲೆ ವರ್ಗಾಯಿಸಿದೆ. ನಾನು ಪಾಠ ಹೇಳಿಕೊಡುವಾಗ ಪಾಪೂನ ನೋಡಿಕೊಳ್ಳುವ ಕೆಲಸ ಇವರಿಗೆ ಅಂಟಿಸಿದೆ. ನನ್ನ ಪಾಠದಿಂದಾಗಿ ರಾತ್ರಿ ತಿಂಡಿ ಅಡಿಗೆಗೆ ಖೋತ ಬಿತ್ತು. ಅಂತೂ ಇಂತೂ ಒಂದು ತಿಂಗಳು ಪಾಠ ಹೇಳಿಕೊಟ್ಟ ಮೇಲೆ ಒಂದು ಸಾವಿರ ದಿರ್ಹ್ಯಾಮ್ಸ್ ಸಂಪಾದಿಸುತ್ತಲೇ ಪಾಠಕ್ಕೆ ನಮಸ್ಕಾರ ಹೊಡೆದೆ.

ಇನ್ನು ದುಡ್ಡೇನೂ ಸಿಕ್ತು. ಇನ್ನು ಸುಯಿಂಗ್ ಮೆಶಿನ್ ಎಷ್ಟೊಂದು ಮಾದರಿಗಳಿವೆ. ಯಾವುದು ತೆಗೆದುಕೊಳ್ಳಬೇಕು ಅಂತ ಪೇಚಾಟ ಹತ್ತಿತು. ಅದಕ್ಕಾಗಿ ಒಂದು ಭಾನುವಾರ ನನ್ನ ಸ್ನೇಹಿತೆಯರನ್ನೆಲ್ಲಾ ಸುಯಿಂಗ್ ಮೆಶಿನ್ ಬಗ್ಗೆ ಸಮಾಲೋಚನೆ ನಡೆಸಲು `Coffee Morning'ಗೆ ಕರೆದೆ. ನನ್ನ ಸಮಸ್ಯೆ ಮುಂದಿಟ್ಟಾಗ Mrs. ನಾಯ್ಡು ತೊಗೊಳ್ಳಾ ತೊಗೊಳ್ಳಾ ಚೆನ್ನಾಗಿರುವ, Made in Germanyಯ Pfaff ಮೆಶಿನ್ನೇ ತೊಗೊಳ್ಳಿ ಅಂತ ಹೇಳಿದರೆ ಇನ್ನೊಬ್ಬ ಗೆಳತಿ, `ಇಂಡಿಯಾದಲ್ಲಿ ಅದರ parts ಎಲ್ಲಾ ಸಿಗಲ್ಲ. ಇಂಡಿಯಾದ Singer ಮೆಶಿನ್ ತೊಗೊಳ್ಳಿ" ಅಂತ ಹೇಳಿದರು. ಹೀಗೆ ಒಬ್ಬೊಬ್ಬರು ಒಂದೊಂದು ಸಲಹೆ ಕೊಟ್ಟರು. ಹೀಗಿದ್ದರೂ ನಿಮಗೆ ಹೆಣ್ಣು ಮಗು ಇದೆ, ಮತ್ತೆ 22 ಥರಾವರಿ ಹೊಲಿಗೆ ಉಳ್ಳ Toyota ಮೆಶಿನ್ ತೆಗೆದುಕೊಂಡರೆ ಸೀರೆ Fall ಮತ್ತು ಬೀಡಿಂಗ್ ಮಾಡಿ ಬೊಂಬಾಯಿಯಲ್ಲಿ Business (ಧಂಧಾ) ಮಾಡಬಹುದು ಅಂತ ಬಿಸಿನೆಸ್ ಮೈಂಡಿನ ಭಾಟಿಯಾ ಹೇಳಿದ ಮೇಲೆ ಟೊಯೋಟಾನೇ ತೊಗೋಳ್ಳೋಣ ಅಂತ ನಿಶ್ಚಯಿಸಿದೆ. ಅವತ್ತಿಂದ ನನ್ನ ಹತ್ತಿರ ದುಡ್ಡಿದೆ. ಬರೀ ಒಂದ್ಸಲ ನೀವು ನನ್ನೊತೆ `ಸುಯಿಂಗ್ ಮೆಶಿನ್' ತೊಗೋಳೊದಕ್ಕೆ ಬನ್ನಿ ಅಂತ ಇವರನ್ನು ಪೀಡಿಸಲು ಶುರುಮಾಡಿದೆ. ಇನ್ನು ರಾಮೇಶ್ವರಕ್ಕೆ ಹೋದರೂ ಶನೀಶ್ವರ ಬಿಡಲ್ಲ ಅಂತ ನನ್ನ ಜೊತೆ ಇವರು ಬರಲು ಸಿದ್ಧರಾದರು. ಯಾವಾಗ ಹೋದರೂ ನನ್ನ ಅದೃಷ್ಟಕ್ಕೆ ಆ ಟೊಯೋಟಾ ಅಂಗಡಿಯ ಬಾಗಿಲು ಹಾಕಿರುತ್ತಿತ್ತು. ಅಂತೂ ಒಂದು ಒಳ್ಳೆಯ ದಿನ ನಾವು ಹೋದಾಗ ತೆಗೆದಿತ್ತು. ಅಂಗಡಿಯವನ ಜೊತೆ ಚೌಕಾಶಿ ಮಾಡಿದ ಮೇಲೆ `ಟೋಯೋಟಾ ಸುಯಿಂಗ್' ಮೆಶಿನ್ ಮನೆಗೆ ಬಂತು.

ಮಾರನೆಯ ದಿನ ಅದಕ್ಕೆ ಆರತಿ ಅಕ್ಷತೆಯಾದ ಮೇಲೆ ಅದರ ಉದ್ಘಾಟನೆ ನನ್ನಿಂದ ಆದ ಮೇಲೆ

(ಪು. 114)

# ಸಂಮೋಹಿನಿ ಚಿಕಿತ್ಸೆ - 15

● ಡಾ| ಉಷಾರಾವ್

## ಮನೋವೈಜ್ಞಾನಿಕ ಚಿಕಿತ್ಸೆಯಲ್ಲಿ ಸಂಮೋಹಿನಿ ಬಳಕೆ

ಸಂಮೋಹಿನಿ ಚಿಕಿತ್ಸಾ ವಿಧಾನದ ಗಮನಾರ್ಹ ಪ್ರಯೋಜನಗಳಲ್ಲೊಂದು ಅನೇಕ ಬಗೆಯ ಸೈದ್ಧಾಂತಿಕ ನಿರ್ದೇಶನಗಳಿಗೆ ಹೊಂದಿಕೊಳ್ಳುವ ಅದರ ಸಾಮರ್ಥ್ಯ. ಒಬ್ಬ ಚಿಕಿತ್ಸಕ ಸಂಮೋಹಿನಿಯನ್ನು ಬಳಸುವಾಗ ಒಂದು ಸೈದ್ಧಾಂತಿಕ ಚೌಕಟ್ಟಿನಲ್ಲಿ ಕೆಲಸಮಾಡುತ್ತಾನೆ. ಉದಾಹರಣೆಗೆ ಸಂಮೋಹಿನಿ -ವಿಶ್ಲೇಷಣಾ ವಿಧಾನದಲ್ಲಿ ಸ್ವತಶ್ಚಲಿ ಬರವಣಿಗೆ, ಶ್ರವಣ ಸಂಬಂಧವಾದ ಭ್ರಮೆ, ದೃಶ್ಯಭ್ರಮೆ ಮುಂತಾದ ಅನೇಕ ತಂತ್ರಗಳನ್ನು ಬಳಸಲಾಗುತ್ತದೆ.

ಸಂಮೋಹಿನಿ ಚಿಕಿತ್ಸೆಯ ಇತಿಹಾಸವು ವಾಸ್ತವವಾಗಿ ಮನೋವೈಜ್ಞಾನಿಕ ಚಿಕಿತ್ಸೆಯ ಇತಿಹಾಸದ ಒಂದು ಭಾಗ. ಈ ತಂತ್ರದ ಸೈದ್ಧಾಂತಿಕ ಬಳಕೆಯ ಇತಿಹಾಸದ ಏಳಿಯು ಅನೇಕ ಬಗೆಯ ಮನ-ಶಾಸ್ತ್ರೀಯ ಸಮಸ್ಯೆಗಳಲ್ಲಿ ಅದರ ಉಪಯೋಗವನ್ನು ಹೊರಗೆಡಹುತ್ತದೆ. ಯಾವುದೇ ಸೈದ್ಧಾಂತಿಕ ಹಿನ್ನೆಲೆಯಲ್ಲಿ ಸಂಮೋಹಿನಿಯ ಪರಿಣಾಮ ಕಾರಿತ್ವವು ಒಂದಕ್ಕಿಂತ ಇನ್ನೊಂದರಲ್ಲಿ ಹೆಚ್ಚು ಎಂಬುದಕ್ಕೆ ಯಾವುದೇ ಸೂಚನೆಯಿಲ್ಲ, ಆದರೆ ರೋಗಿಗಳು ಅವರ ಸೈದ್ಧಾಂತಿಕ ಒಲವಿನ ಕಾರಣವಾಗಿ ಅಥವಾ ಅದರ ಪರಿವೆಯಿಲ್ಲದೆ ಚಿಕಿತ್ಸಕರ ಸೂಚನೆಗಳಿಗೆ ಹೊಂದಿಕೊಳ್ಳುವಲ್ಲಿ ಮತ್ತು ಪ್ರತಿ ಕ್ರಿಯಿಸುವಲ್ಲಿ ವ್ಯತ್ಯಾಸವಿರುವುದು. ಪ್ರಸ್ತುತ ಲೇಖನ ಸಂಮೋಹಿನಿ ಚಿಕಿತ್ಸೆಯ ನೇರ ಬಳಕೆಯ ಬಗೆಗೆ ಒತ್ತಿ ನುಡಿಯುವುದು. ಆದುದರಿಂದ ಸಂಮೋಹಿನಿ-ವಿಶ್ಲೇಷಣಾ ತಂತ್ರದ ಸಂಕೀರ್ಣ ವಿಷಯಗಳನ್ನು ಇಲ್ಲಿ ಚರ್ಚಿಸಿಲ್ಲ. ಈ ಕಾರಣದಿಂದಾಗಿ ನನ್ನ ಬಳಿಗೆ ಚಿಕಿತ್ಸೆಗಾಗಿ ಬಂದು ಸಂತೋಷ ಚಿತ್ತರಾಗಿ ಹಿಂದಿರುಗಿ ಹೋದ ವಿವಿಧ ರೋಗಿಗಳ ಬಗೆಗೆ ವಿವರಿಸಲು ಇಲ್ಲಿ ಪ್ರಯತ್ನಿಸಿದ್ದೇನೆ.

### 1. ಜಠರಾಂತ್ರ ಸಂಬಂಧದ ತೊಂದರೆ

ಗೋಪಾಲ್ ನನ್ನ ಬಳಿಗೆ ಬಂದಾಗ ಆತನಿಗೆ 40ರ ನಡುಪ್ರಾಯ. ದೀರ್ಘಕಾಲದಿಂದ ಆತ ಜಠರಾಂತ್ರ ತೊಂದರೆಯಿಂದ ನರಳುತ್ತಿದ್ದ. ಯಾವುದೇ ಬಗೆಯ ಔಷಧೋಪಚಾರಗಳಿಂದಲೂ ಪ್ರಯೋಜನವಾಗಲಿಲ್ಲ. ಆತನಿಗೆ ನಾನು ಸ್ವಯಂ -ಸಂಮೋಹಿನಿ ತಂತ್ರವನ್ನು ಬೋಧಿಸಿದೆ. ಹೇಳಿ ಕೊಟ್ಟಿದ್ದನ್ನು ಮನೆಯಲ್ಲೇ ಆತ ಮಾಡಿಕೊಳ್ಳು ವಂತಾಗಲು ಈ ತಂತ್ರ ಅನುಕೂಲವಾಯಿತು. ದಿನ ಬಿಟ್ಟು ದಿನ ಕ್ಲಿನಿಕ್‌ಗೆ ಬರಲು ಆತನಿಗೆ ಹೇಳಿದೆ. ಹತ್ತು ದಿನಗಳ ನಂತರ ಆತನನ್ನು ವಾರಕ್ಕೊಮ್ಮೆ ಬರುಂತೆ ಹೇಳಿದೆ. ಒಂದೂವರೆ ತಿಂಗಳ ಕಾಲ ನಿಯತವಾಗಿ ಅಭ್ಯಾಸ ಮಾಡಿಸಿದ ನಂತರ ಗೋಪಾಲನಲ್ಲಿ ಸಂಮೋಹಿನಿ ಮೂಲಕ ರೋಗ ಲಕ್ಷಣಗಳಿಗೆ ಸಂಬಂಧಿಸಿದಂತೆ ಉಪಶಮನ ಕಂಡು ಬಂತು.

ಪ್ರತಿಸಲ ಆತ ನನ್ನಲ್ಲಿಗೆ ಬಂದಾಗಲೆಲ್ಲ, ನಮ್ಮಿಬ್ಬರಲ್ಲಿ ಪರಸ್ಪರ ವಿಶ್ವಾಸ ಉಂಟುಮಾಡಲು ನಾನು ಪ್ರಯತ್ನಿಸಿದೆ ಮತ್ತು ಆತ ತಾನಾಗಿಯೇ ತನ್ನ ಬಗೆಗೆ ಬಹಳಷ್ಟು ಮಾತನಾಡುತ್ತಿದ್ದ. ಆದರೆ ಈ ರೋಗಲಕ್ಷಣಗಳಿಗೆ ಸಂಬಂಧಿಸಿದ ಉಪಶಮನದೊಂದಿಗೇ ಚಿಕಿತ್ಸೆಯನ್ನು ನಿಲ್ಲಿಸಲು ನಾನು ಸಿದ್ಧಳಿರಲಿಲ್ಲ. ಆದುದರಿಂದ `ಡಿಸೆನ್ಸಿಟೈಸೇಷನ್' ತಂತ್ರವನ್ನು ಬಳಸಿ ಆತನನ್ನು ಲಘುಟ್ರಾನ್ಸ್‌ಗೆ ಒಳಪಡಿಸಿ ಪೂರ್ಣ ಗುಣವಾಗುವ ಬಗೆಗೆ ಸೂಚನೆಗಳನ್ನು ನೀಡಿದೆ.

ಗೋಪಾಲ್ ತನ್ನಲ್ಲಿನ ವಾಸ್ತವಿಕ ಬದಲಾವಣೆಗಳನ್ನು ಒಪ್ಪಿಕೊಂಡ ಹಾಗೂ ತನಗೆ ಪೂರ್ಣ ಉಪಶಮನದ ಸ್ಪಷ್ಟ ಅನುಭವ ಆಗುತ್ತಿರುವುದಾಗಿ ಹೇಳಿದ. ಆದರೆ ಮಾಮೂಲಿ ಮೆಡಿಕಲ್ ಚೆಕಪ್ ಮೂಲಕ ಮತ್ತಷ್ಟು ಸಹಾಯ ತನಗೆ ಆಗತ್ಯ ಎಂದು ಹೇಳಿದ (ಪ್ರಾರಂಭದಲ್ಲಿ ಇದನ್ನು ಆತ ಕಟುವಾಗಿ ಟೀಕಿಸಿದ್ದ) ಕೆಲವು ರೋಗಿಗಳು ತಮಗೇನು ಬೇಕೆಂದು ಹೇಳುವರೋ ಅದನ್ನು ಅವರು ವಾಸ್ತವವಾಗಿ ಇಚ್ಛಿಸುವುದಿಲ್ಲ ಎಂಬುದಕ್ಕೆ ಗೋಪಾಲ್ ಪ್ರಕರಣ ಒಂದು ಉದಾಹರಣೆ. ವಾಸ್ತವವಾಗಿ ತಾನು ನರಳುತ್ತಿದ್ದ ತೊಂದರೆಯ ಚಿಹ್ನೆಗಳಿಂದ ಪರಿಹಾರ ಪಡೆಯುವುದು ಗೋಪಾಲ್‌ನ ಗುರಿಯಾಗಿತ್ತು. ಆದರೆ ಈಗ ಆತ ತಾನು ಮತ್ತೆ ವೈದ್ಯಕೀಯ ಚಿಕಿತ್ಸೆಗೆ ಹಿಂದಿರುಗಬೇಕೆಂದು ಹೇಳಿದಾಗ ಆತನ ಇಚ್ಛಿತ ಗುರಿ (ಚಿಹ್ನೆಗಳ ಉಪಶಮನ) ಆಂತರಿಕ ಘರ್ಷಣೆಗೆ ಹಾದಿಮಾಡಿತು.

ಗೋಪಾಲ್‌ನಂಥ ರೋಗಿಗಳೊಂದಿಗೆ ಸಂಮೋಹಿನಿ ಚಿಕಿತ್ಸಾ ಉಪಚಾರ ಮುಖ್ಯಗುರಿ ಅವರ ವ್ಯಾಧಿಯನ್ನು ಗುಣಪಡಿಸುವ ಸಾಧ್ಯತೆ ಬಗೆಗೆ ಅವರಿಗೆ ಆಶ್ವಾಸನೆ ನೀಡುವುದು. ಆ ಗುರಿ ಸಾಧನೆಯಾದ ನಂತರ ಚಿಕಿತ್ಸೆಯನ್ನು ನಿಲ್ಲಿಸಿದೆ. ಗೋಪಾಲ್ ಗುಣಹೊಂದಿದ.

### 2. ತಲೆ, ಕುತ್ತಿಗೆ ಮತ್ತು ಕೈಕಾಲುಗಳ ಅನೈಚ್ಛಿಕ ನಡುಕ

19ವರ್ಷ ವಯಸ್ಸಿನ ಸುಂದರ ಹುಡುಗಿ ಸುಷ್ಮಾಳನ್ನು ಅವಳ ತಾಯಿತಂದೆಯರು ನನ್ನ ಬಳಿ ಕರೆತಂದರು. ತಲೆ, ಕುತ್ತಿಗೆ ಮತ್ತು ಕೈ ಕಾಲುಗಳ ತೀವ್ರ ಕಂಪನ ಅವಳ ತೊಂದರೆ, ಅವಳ 16ನೆಯ ವಯಸ್ಸಿನಿಂದ ಅವಳಲ್ಲಿ ಈ ಲಕ್ಷಣಗಳನ್ನು ಗಮನಿಸಿರುವುದಾಗಿ ಅವಳ ಮಾತಾ ಪಿತೃಗಳು ಹೇಳಿದರು. ಸುಷ್ಮಾ ಸೀನುವ ಶಬ್ದಗಳನ್ನು ಮಾಡುತ್ತಿದ್ದಳು. ಕೆಲವೊಮ್ಮೆ ಅದು ನಿಯಂತ್ರಣಕ್ಕೆ ಬರುತ್ತಿರಲಿಲ್ಲ. ಅನೇಕ ವೈದ್ಯಕೀಯ ಸಮಾಲೋಚನೆಗಳು ಔಷಧಗಳಿಂದ ಕೂಡ ಪ್ರಯೋಜನವಾಗಲಿಲ್ಲ. ಅನಂತರ ಸುಷ್ಮಾಳ ತಾಯಿತಂದೆ ಸಂಮೋಹಿನಿ ಚಿಕಿತ್ಸೆಗಾಗಿ ಅವಳನ್ನು ನನ್ನ ಬಳಿ ಕರೆತಂದರು.

ಸುಷ್ಮಾ ನನ್ನೊಂದಿಗೆ ಧಾರಾಳವಾಗಿ ಮಾತಾಡುವಂತೆ ಹಾಗೂ ಅವಳ ಹೃದಯದ ಭಾವನೆಗಳನ್ನು ನನ್ನಲ್ಲಿ ತೆರೆದಿಡುವಂತೆ ಮಾಡಿದೆ. ಅವಳು ಬಹಳ ಮುದ್ದಿನಿಂದ ಬೆಳೆದ ಹುಡುಗಿ. ಅವಳೊಬ್ಬಳೇ ಮಗುವಾಗಿದ್ದಾಗ ಮಾತಾಪಿತರ ಪೂರ್ಣ ಗಮನ ಅವಳತ್ತ ಇತ್ತು. ಅವಳಿಗೆ 12ವರ್ಷಗಳಾದಾಗ ಅವಳ ತಾಯಿಗೆ ಒಂದು ಗಂಡುಮಗು ಜನಿಸಿತು. ಪ್ರೀತಿ, ಆರೈಕೆ, ಗಮನ, ಅನುಕಂಪ ಎಲ್ಲವೂ ಈಗ ಈ ಎರಡು ಮಕ್ಕಳ ನಡುವೆ ಹಂಚಿ ಹೋದವು. ಕುಟುಂಬಕ್ಕೆ ಈ ಹೊಸ ಸದಸ್ಯನ ಆಗಮನ ತನಗೆ ಇಷ್ಟವಾಗಲಿಲ್ಲ ಎಂದು ಅವಳು ನನ್ನಲ್ಲಿ ಬಹಿರಂಗವಾಗಿ ಹೇಳಿದಳು. ಇಂದಿಗೂ ಅವಳು ತಮ್ಮನನ್ನು ಇಷ್ಟಪಡುವುದಿಲ್ಲ. `ಅಮ್ಮ, ಅಪ್ಪ ಇಬ್ಬರಿಗೂ ನಾನು ಬೇಕಾಗಿಲ್ಲ....

ಅವನು ನನ್ನನ್ನು ಪ್ರೀತಿಸುವುದಿಲ್ಲ.... ಈಗ ಅವನಿಗೆ ನನ್ನ ಅಗತ್ಯವಿಲ್ಲ....' ಇಂಥ ಭಾವನೆ ಅವಳ ತಲೆ ಹಾಗೂ ಕುತ್ತಿಗೆ ಅದುರುವಂತೆ ಮಾಡಿತು. ಮತ್ತು ಈ ಭಾವನೆ ಅವಳಲ್ಲಿ ಉಂಟಾದಾಗಲೆಲ್ಲ ಅವಳ ಕೈಕಾಲುಗಳು ನಡುಗಲಾರಂಭಿಸುದುವು. ತಲೆ ಅದುರುವುದು ಮತ್ತು ಕುತ್ತಿಗೆ ಅತ್ತಿತ್ತ ಚಲಿಸಲಾರಂಭಿಸುವುದು! ಇವೆಲ್ಲ ಸೀನುವ ಶಬ್ದಕ್ಕೂ ದಾರಿ ಮಾಡಿತು. ಕಡೆಗೆ ಅದು ನಿಯಂತ್ರಿಸಲಾರದಂಥ ಪರಿಸ್ಥಿತಿ ತಲುಪಿತು.

ಸುಷ್ಮಾಳ ವ್ಯಾಧಿಯ ಇತಿಹಾಸವನ್ನು ಪರಿಶೀಲಿಸಿದ ನಂತರ ನಾನು ಅವಳನ್ನು ಲಘುವಾದ ಸಂಮೋಹಿನಿ ಟ್ರಾನ್ಸ್‌ಗೆ ಒಳಪಡಿಸಿ ಅವಳೊಂದಿಗೆ ಮಾತನಾಡಿದೆ-ಅದು ಪರಸ್ಪರ ಅರಿತುಕೊಳ್ಳುವ ಹಾಗೂ ಮುಕ್ತ ಮಾತುಕತೆಯಾಗಿತ್ತು. ಈ ರೀತಿ ಒಂದು ವಾರ ಕಾಲ ದಿನಕ್ಕೆ ಮೂರರಿಂದ ಐದು ಸಾರಿ ಮುಂದುವರಿಯಿತು !ಅನಂತರ ಅವಳಿಗೆ ಸಂಮೋಹಿನಿ-ನಂತರದ ಸೂಚನೆಗಳನ್ನು ನೀಡಲಾರಂಭಿಸಿದೆ. ಆದರಿಂದ ಸುಷ್ಮಾಗೆ ಹಾಯೆನಿಸಿತು ಹಾಗೂ ಅವಳ ತಪ್ಪು ಯೋಚನೆಯಿಂದ ಉಂಟಾಗಿದ್ದ ಮಾನಸಿಕ ಒತ್ತಡ ಕಡಿಮೆಯಾಯಿತು. ಹೀಗೆ ಮೂರು ವಾರಗಳ ವರೆಗೆ ಅಭ್ಯಾಸ ಮಾಡಿದ ನಂತರ ಅವಳ ಅವಯವಗಳ ಅನೈಚ್ಛಿಕ ನಡುಕ ಕಡಿಮೆಯಾಗುತ್ತ ಬಂತು. ಅಂತಿಮವಾಗಿ ಈ ನಡುಕ ಅವಾಂತರಗಳೆಲ್ಲ ಮಾಯವಾದವು! ವಾಸ್ತವವಾಗಿ ಇದೊಂದು ಅದ್ಭುತ ಬದಲಾವಣೆ. ಅವಳ ತಾಯಿತಂದೆಯರಿಗೂ ಆತಂಕ ದೂರವಾಗಿ ಸಂತೋಷಗೊಂಡರು!

**3. ಓಕರಿಕೆ ಮತ್ತು ವಾಂತಿಯ ಪ್ರಕರಣ:**

30 ವರ್ಷ ವಯಸ್ಸಿನ ಸುಂದರವಾದ ಯುವತಿ ನಳಿನಿ ತನ್ನ ಪತಿಯ ಜತೆ ನನ್ನ ಬಳಿ ಬಂದಳು. ಅವಳ ತೊಂದರೆ ಓಕರಿಕೆ ಮತ್ತು ವಾಂತಿ. ಮಾಮೂಲಿನಂತೆ ನಳಿನಿಯ ರೋಗದ ಇತಿಹಾಸವನ್ನು ಸಂಗ್ರಹಿಸುತ್ತಿದ್ದಾಗ ಕೆಲವು ತಿಂಗಳ ಹಿಂದೆ ನಳಿನಿ ಅಜೀರ್ಣ ಮತ್ತು ಗಂಟಲು ಹುಣ್ಣಿನಿಂದ ನರಳಿದ್ದಳು ಎಂಬುದು ನನಗೆ ಗೊತ್ತಾಯಿತು. ಲ್ಯಾಬರೇಟರಿ ಪರೀಕ್ಷೆಗಳನ್ನು ಮಾಡಿ ನಳಿನಿಗೆ ಚಿಕಿತ್ಸೆ ನೀಡಲಾಗಿತ್ತು. ಜತೆಗೆ ಗಲಗ್ರಂಥಿಯ ಉರಿಯೂ (ಟಾನ್ಸಿಲ್ಸ್) ಶಸ್ತ್ರ ಚಿಕಿತ್ಸೆಯಿಂದ ನಳಿನಿಯು ಗಂಟಲು ತೊಂದರೆಯೂ ನಿವಾರಣೆಯಾಗಿತ್ತು. ಆದರೆ ಅದು ತಾತ್ಕಾಲಿಕ ಉಪಶಮನವಾಗಿತ್ತು. ನಳಿನಿ ಚಿಂತಿಸಲಾರಂಭಿಸಿದಳು. ಆದರಿಂದ ನರಗಳಿಗೆ ಸಂಬಂಧಿಸಿದಂತೆ ತಳಮಳ-ಮನೋಬೇನೆ (Anxiety-neurosis) ಅವರಲ್ಲಿ ಬೆಳೆಯಿತು. ಅದು ಓಕರಿಕೆ ಮತ್ತು ವಾಂತಿಗೆ ದಾರಿ ಮಾಡಿತು.

ನಳಿನಿಯೊಂದಿಗೆ ಪೂರ್ತಿ ವಿಶ್ವಾಸ ಬೆಳೆಸಿಕೊಂಡ ನಂತರ ಆಕೆಯೊಂದಿಗೆ ಮಾತನಾಡಲಾರಂಭಿಸಿದಾಗ, ವಿವಿಧ ಬಗೆಯ ಒತ್ತಡಗಳು ಕಾತರತೆಯ ಮಟ್ಟದ ಮೇಲೆ ಪ್ರಭಾವ ಬೀರುತ್ತದೆಂಬ ಸಂಗತಿ ನಳಿನಿಗೆ ಚೆನ್ನಾಗಿ ತಿಳಿದಿತ್ತು ಎಂದು ತಿಳಿದು ನನಗೆ ಆಶ್ಚರ್ಯವಾಯಿತು! ನಳಿನಿ ನಿಜಕ್ಕೂ ಬುದ್ಧಿಶಾಲಿ ಹೆಂಗಸು. ಗುಣವಾಗಬೇಕೆಂದು ಆಕೆಗೆ ಆಸೆಯಿತ್ತು ಹಾಗೂ ಸಂಮೋಹಿನಿ ಚಿಕಿತ್ಸೆಯಲ್ಲಿ ಆಕೆಗೆ ಪೂರ್ಣ ವಿಶ್ವಾಸವಿತ್ತು.

ಚಿಕಿತ್ಸೆ ಪ್ರಾರಂಭವಾಯಿತು. ಕಾತರತೆಯನ್ನು ಹೋಗಲಾಡಿಸಲು ಸೂಚನೆಗಳನ್ನು ಕೊಡಬೇಕಾಯಿತು. ಇದು ರೋಗದ ಲಕ್ಷಣಗಳನ್ನು ಕಡಿಮೆ ಮಾಡುವುದು ಎಂದು ನಳಿನಿಗೆ ಹೇಳಲಾಯಿತು. ಅದೇ ಸಮಯದಲ್ಲಿ, ಒತ್ತಡ ಪರಿಸ್ಥಿತಿಗಳೊಡನೆ ಆಕೆ ಹೆಚ್ಚು ಪರಿಣಾಮಕಾರಿಯಾಗಿ ನಿಭಾಯಿಸಲಾಗುವಂತೆ ಆಕೆಯನ್ನು ಕಾಡುತ್ತಿದ್ದ ಸಮಸ್ಯೆಗಳ ಬಗೆಗೆ ಕಾರ್ಯೋನ್ಮುಖಿಯಾಗುವಂತೆ ಆಕೆಯನ್ನು ಪ್ರೋತ್ಸಾಹಿಸಿದೆ. ಪೂರ್ತಿ ಮೂರು ವಾರಗಳವರೆಗೆ ನಾನು ಏನೂ ಮಾಡಲಿಲ್ಲ. ಮೂರು ವಾರಗಳ ನಂತರ ಸಂಮೋಹಿನಿ ಸೂಚನೆಗಳನ್ನು ಮತ್ತೆ ಮತ್ತೆ ನೀಡಲಾಯಿತು. ಅನಂತರ ಹದಿನಾಲ್ಕು ದಿನಗಳ ಅಂತರದಲ್ಲಿ ನಾಲ್ಕು ಸಾರಿ ಚೆಕಪ್ ಸಂದರ್ಶನಗಳನ್ನು ನಡೆಸಲಾಯಿತು. ಸುಮಾರು ಆರು ತಿಂಗಳುಗಳ ನಂತರ ನಳಿನಿ ಪೂರ್ತಿ ಗುಣ ಹೊಂದಿದಳು. ಆಕೆಯ ಪತಿಗೆ ಸಂತೋಷವಾಯಿತು.

**4. ವಿವಾಹಿತ ಮಹಿಳೆಗೆ ಸಂಭೋಗದ ಬಗೆಗೆ ಹೆದರಿಕೆ**

